# ಕರ್ನಾಟಕ ಸರ್ಕಾರ
# ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

## 2010-2011ನೇ ಸಾಲಿನ ಕಾರ್ಯ ನಿರ್ವಹಣಾ ಮುಂಗಡ ಪತ್ರ

## ಮುನ್ನುಡಿ

ರಾಜ್ಯದಲ್ಲಿ ಅತಿ ಸಣ್ಣ, ಸಣ್ಣ, ಮಧ್ಯಮ, ಬೃಹತ್ ಹಾಗೂ ಮಹಾ ಯೋಜನೆಗಳನ್ನು ಪ್ರಾರಂಭಿಸಲು ಹಾಗೂ ಕೈಗಾರಿಕಾ ಬೆಳವಣಿಗೆಗೆ ಅತ್ಯವಶ್ಯಕವಾದ ಸೌಲಭ್ಯಗಳು ಅಂದರೆ ಉತ್ತಮ ಗುಣಮಟ್ಟದ ಹಾಗು ಅವಶ್ಯಕತೆ ಇರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು, ವಿವಿಧ ರೀತಿಯ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡುವುದು, ತಾಂತ್ರಿಕ ಸಹಾಯ, ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ ಏರ್ಪಡಿಸುವುದು, ಮಾರುಕಟ್ಟೆ ಸಹಾಯ, ಕುಶಲತಾ ಅಭಿವೃದ್ಧಿ  ತರಬೇತಿ ಇತ್ಯಾದಿಗಳನ್ನು ನೀಡುವುದು ಇಲಾಖೆಯ ಮುಖ್ಯ ಉದ್ದೇಶವಾಗಿರುತ್ತದೆ.

ವಿವಿಧ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳನ್ನು ರಾಜ್ಯಮಟ್ಟದಲ್ಲಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಈ ಕೆಳಕಂಡ ನಿಗಮ ಮತ್ತು ಮಂಡಳಿಗಳನ್ನು ಸ್ಥಾಪಿಸಿದೆ. ಕೆಐಎಡಿಬಿ, ಕೆಎಸ್ಎಸ್ಐಡಿಸಿ, ಕೆವಿಐಬಿ, ಕೆಯುಎಂ, ವಿಐಟಿಸಿ, ಕೆಸಿಟಿಯು, ಕೆಎಸ್‌ಹೆಚ್‌ಡಿಸಿ, ಕೆಎಸ್‌ಸಿಡಿಸಿ, ತೆಂಗಿನ ನಾರಿನ ಮಹಾಮಂಡಳಿ, ಸಿಡಾಕ್, ಟೆಕ್ಸಾಕ್, ಜಿಟಿಟಿಸಿ, ಲಿಡ್ಕರ್, ಕಿಲ್ಪ್ ಇತ್ಯಾದಿ.

ಜಿಲ್ಲಾ ಮಟ್ಟದಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಘಟಕಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾ ಕೈಗಾರಿಕಾ ಕೇಂದ್ರಗಳು ಪ್ರಮುಖ ಪಾತ್ರ ವಹಿಸುತ್ತವೆ.

ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕೆಲವು  ಪ್ರಮುಖ ಯೋಜನೆಗಳು: ಕೈಗಾರಿಕಾ ನೀತಿಯಡಿಯಲ್ಲಿ ವಿವಿಧ ರೀತಿಯ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಹೊರತಾಗಿ,  ವಿಶೇಷ ಅಭಿವೃದ್ಧಿ ಕಾರ್ಯಕ್ರಮ, ಕೈಗಾರಿಕಾ ವಿಕಾಸ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಸುವರ್ಣ ಕಾಯಕ ಕೌಶಲ್ಯಾಭಿವೃದ್ಧಿ ಯೋಜನೆ, ಆಧುನೀಕರಣ, ತಾಂತ್ರಿಕತೆ ಹಾಗೂ ತರಬೇತಿ, ಮೂಲಭೂತ ಸೌಲಭ್ಯ, ವ್ಯಾಪಾರ ಉತ್ತೇಜನ ಮಾರುಕಟ್ಟೆ ಅಭಿವೃದ್ಧಿ ಸಹಾಯ, ಖಾದಿ ರಿಬೇಟ್ ಇತ್ಯಾದಿ.

ಅಪರಲ್ ಪಾರ್ಕ್, ಫುಡ್ ಪಾರ್ಕ್, ವಿಶೇಷ ವಿತ್ತವಲಯ, ಕೈಗಾರಿಕಾ ಪಾರ್ಕ್‌ಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿಸಲಾಗುತ್ತಿದ್ದು, ಇಲ್ಲಿ ವಿಶ್ವದರ್ಜೆಯ ಉನ್ನತಮಟ್ಟದ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ರಾಜ್ಯಕ್ಕೆ ಬಂಡವಾಳವನ್ನು ಆಕರ್ಷಿಸಲು ರಾಷ್ಟ್ರ / ಅಂತರಾಷ್ಟ್ರೀಯ ಮಟ್ಟದಲ್ಲಿ ಈ ಸೌಕರ್ಯಗಳ ಬಗ್ಗೆ ರೋಡ್ ಶೋಗಳನ್ನು ಏರ್ಪಡಿಸಲಾಗುತ್ತಿದೆ.

ಕುಶಲ ಕರ್ಮಿಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು, ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡುವುದು, ವಸತಿ ಮತ್ತು ಕಾರ್ಯಗಾರಗಳನ್ನು ಒದಗಿಸುವುದು, ಮಾರುಕಟ್ಟೆ ಸಹಾಯ, ಖಾದಿ ಉತ್ಪನ್ನಗಳ ಮೇಲೆ ರಿಯಾಯಿತಿ, ಸಾಮೂಹಿಕ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

# ಕಾರ್ಯಗತವಾದ ಯೋಜನೆಗಳು

## I. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ವಲಯ:

| ಕ್ರ.ಮ ಸಂಖ್ಯೆ | ಯೋಜನೆಯ ಹೆಸರು | ಆಯವ್ಯಯ ಹಂಚಿಕೆ (ಲಕ್ಷ ರೂ.ಗಳಲ್ಲಿ) | ಬಿಡುಗಡೆಯಾದ ಮೊತ್ತ (ಲಕ್ಷ ರೂ.ಗಳಲ್ಲಿ) | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|---|
| 1 | ಸಂಸ್ಥೆಗಳಿಗಾಗಿ ಕೈಗಾರಿಕಾ ಮೂಲಭೂತ ಸೌಕರ್ಯಗಳು 4852–02–800–0–01 | 454.25 | 379.25 | 379.25 |
| **2** | ಮೂಲಭೂತ ಸೌಕರ್ಯ ಮತ್ತು ವ್ಯಾಪಾರ ಉತ್ತೇಜನ 2851–80–800–0–46 | 2080.00 | 2071.04 | 2071.04 |
| **3** | ಅರ್ಬನ್ ಹಾಥ್ 2852–80–800–0–47 | 345.00 | 280.00 | 280.00 |
| **4** | ವಿಶೇಷ ಘಟಕ ಯೋಜನೆ 2852-80-789-0-00 | 310.50 | 243.00 | 243.00 |
| **5** | ಗಿರಿಜನ ಉಪ ಯೋಜನೆ 2852-80-796-0-01 | 40.25 | 30.00 | 30.00 |
| | **ಒಟ್ಟು** | **3230.00** | **3003.29** | **3003.29** |

### 1. ಕೆಐಎಡಿಬಿ/ಕೆಎಸ್ಎಸ್ಐಡಿಸಿ ಸಂಸ್ಥೆಗಳಿಗಾಗಿ ಕೈಗಾರಿಕಾ ಮೂಲಭೂತ ಸೌಕರ್ಯಗಳು: ಲೆಕ್ಕಶೀರ್ಷಿಕೆ:4852–02–800–0–01: ಆಯವ್ಯಯ ಹಂಚಿಕೆ:ರೂ.454.25 ಲಕ್ಷಗಳು.

| ಆಯವ್ಯಯ ಹಂಚಿಕೆ (ಲಕ್ಷ ರೂ.ಗಳಲ್ಲಿ) | ಬಿಡುಗಡೆಯಾದ ಮೊತ್ತ (ಲಕ್ಷ ರೂ.ಗಳಲ್ಲಿ) | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| 454.25 | 379.25 | 379.25 |

**ಕೆ.ಐ.ಎ.ಡಿ.ಬಿ:** ಗುಲ್ಬರ್ಗ ವಿಭಾಗದ ಜಿಲ್ಲೆಗಳಿಗೆ ಗುಲ್ಬರ್ಗ ಜಿಲ್ಲೆಯ ಕಪನೂರು, ಗದಗ ಜಿಲ್ಲೆಯ ನರಸಾಪುರ ತಾಲ್ಲೂಕು, ಧಾರವಾಡ ಜಿಲ್ಲೆಯ ಬೇಲೂರು ತಾಲ್ಲೂಕು ಹಾಗೂ ಬಿಜಾಪುರ ಜಿಲ್ಲೆಯ ಅಲಿಯಾಬಾದ್ ತಾಲ್ಲೂಕು ಕೈಗಾರಿಕಾ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಉನ್ನತೀಕರಿಸಲು **ರೂ.254.25 ಲಕ್ಷಗಳನ್ನು** ಕರ್ನಾಟಕ ಕೈಗಾರಿಕಾ ಪ್ರದೇಶ ಮಂಡಳಿಯವರಿಗೆ ಬಿಡುಗಡೆ ಮಾಡಲಾಗಿದೆ.

**ಕೆ.ಎಸ್.ಎಸ್.ಐ.ಡಿ.ಸಿ:** ಬಾಗಲಕೋಟೆ ಜಿಲ್ಲೆಯ ನವನಗರ ಕೈಗಾರಿಕಾ ವಸಾಹತು ಸಲುವಾಗಿ ಒಟ್ಟು **ರೂ.125.00 ಲಕ್ಷಗಳನ್ನು** ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

## 2) ಮೂಲಭೂತ ಸೌಕರ್ಯ ಮತ್ತು ವ್ಯಾಪಾರ ಉತ್ತೇಜನ:
### ಲೆಕ್ಕ ಶೀರ್ಷಿಕೆ: 2852-80-800-0-46 ಆಯವ್ಯಯ: ರೂ.2080.00 ಲಕ್ಷಗಳು.

| ಕ್ರಮ. ಸಂಖ್ಯೆ | ಉಪ ಯೋಜನೆ | ಆಯವ್ಯಯ ಹಂಚಿಕೆ (ಲಕ್ಷ ರೂ.ಗಳಲ್ಲಿ) | ಅನುದಾನ ಬಿಡುಗಡೆ (ಲಕ್ಷ ರೂ.ಗಳಲ್ಲಿ) | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|---|
| ಅ | ಕರ್ನಾಟಕ ಉದ್ಯೋಗ ಮಿತ್ರ ವತಿಯಿಂದ ವಿಶ್ವ ಬಂಡವಾಳ ಹೂಡಿಕೆ ಸಮಾವೇಶಕ್ಕೆ ರೋಡ್‌ಶೋಗಳನ್ನು ಮಾಡುವುದಕ್ಕಾಗಿ | 1500.00 | 1500.00 | 1500.00 |
| ಆ | ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರ, ಮುಖಾಂತರ ವ್ಯಾಪಾರ, ವಸ್ತು ಪ್ರದರ್ಶನಗಳನ್ನು ಮತ್ತು ರಫ್ತು ಉತ್ತೇಜನ ಕಾರ್ಯಕ್ರಮಗಳಿಗಾಗಿ | 200.00 | 197.00 | 197.00 |
| ಇ | ಕೆಸಿಟಿಯು | 30.00 | 19.60 | 19.60 |
| ಈ | ವಿಚಾರ ಸಂಕಿರಣಗಳು ಮತ್ತು ವಸ್ತು ಪ್ರದರ್ಶನಗಳು -ಜಿಲ್ಲಾ ಮಟ್ಟದಲ್ಲಿ ವಿಚಾರ ಸಂಕಿರಣ ಮತ್ತು ವಸ್ತು ಪ್ರದರ್ಶನ ಏರ್ಪಡಿಸುವುದಕ್ಕಾಗಿ | 150.00 | 86.00 | 86.00 |
| ಉ | ಪ್ರಚಾರ ಮತ್ತು ಪ್ರಕಟಣೆ- (ಕೈಗಾರಿಕಾ ಸಂಘಗಳು ಸರ್ಕಾರೇತರ ಸಂಸ್ಥೆಗಳು) | 100.00 | 241.69 | 241.69 |
| ಊ | ಕಲಾ ವೈಭವ ವಸ್ತುಪ್ರದರ್ಶನ | 50.00 | 17.50 | 17.50 |
| ಋ | ಅಭಿವೃದ್ಧಿ ಕಾರ್ಯಕ್ರಮಗಳು | 50.00 | 9.25 | 9.25 |
| | **ಒಟ್ಟು** | **2080.00** | **2071.04** | **2071.04** |

**ಅ) ಕರ್ನಾಟಕ ಉದ್ಯೋಗ ಮಿತ್ರ ವತಿಯಿಂದ ವಿಶ್ವ ಬಂಡವಾಳ ಹೂಡಿಕೆ ಸಮಾವೇಶಕ್ಕೆ ರೋಡ್‌ಶೋಗಳನ್ನು ಮಾಡುವುದಕ್ಕಾಗಿ: ಜಾಗತಿಕ ಬಂಡವಾಳ ಸಮಾವೇಶ -2010** ಅನ್ನು ಆಯೋಜಿಸಲು ಒಟ್ಟು **ರೂ.1500.00** ಲಕ್ಷಗಳನ್ನು ಕರ್ನಾಟಕ ಉದ್ಯೋಗ ಮಿತ್ರ ರವರಿಗೆ ಬಿಡುಗಡೆ ಮಾಡಲಾಗಿದೆ.

**ಆ) ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರದ** ಮುಖಾಂತರ ವ್ಯಾಪಾರ, ವಸ್ತು ಪ್ರದರ್ಶನ ಮತ್ತು ರಫ್ತು ಉತ್ತೇಜನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಒಟ್ಟು **ರೂ.197.00** ಲಕ್ಷಗಳನ್ನು 2010-11ನೇ ಸಾಲಿನಲ್ಲಿ ವಿ.ಐ.ಟಿ.ಸಿ. ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

**ಇ) ಕೆಸಿಟಿಯು:** ವಿಚಾರ ಸಂಕಿರಣಗಳನ್ನು ಏರ್ಪಡಿಸಲು, ತಂತ್ರಜ್ಞಾನ ವರ್ಗಾವಣೆ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು 2010-11ನೇ ಸಾಲಿನಲ್ಲಿ ಒಟ್ಟು **ರೂ.19.60** ಲಕ್ಷಗಳನ್ನು ಕೆ.ಸಿಟಿ.ಯು ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

**ಈ) ವಿಚಾರ ಸಂಕಿರಣಗಳು ಮತ್ತು ವಸ್ತು ಪ್ರದರ್ಶನಗಳು : ಎನ್.ಜಿ.ಓ,** ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಇತರೆ ಸಂಸ್ಥೆಗಳಿಗಾಗಿ ಒಟ್ಟು **ರೂ.86.00** ಲಕ್ಷಗಳನ್ನು ಈ ಕೆಳಕಂಡ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಮಾಡಲಾಗಿದೆ.

- ಹಾಸನ ಜಿಲ್ಲೆಯಲ್ಲಿ ವಸ್ತು ಪ್ರದರ್ಶನವನ್ನು ಏರ್ಪಡಿಸಲು ರೂ.2.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
- 6ನೇ ಇಂಡಿಯನ್ ಇನ್ನೋವೇಶನ್ ಸಮಿತಿ–2010 ನ್ನು ಆಯೋಜಿಸಲು ರೂ.10.00 ಲಕ್ಷಗಳನ್ನು "Confideration of India Industries" ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.
- "Positioning Karnataka in the next decade" ಎಂಬ ಕಾರ್ಯಗಾರವನ್ನು ಏರ್ಪಡಿಸಲು ರೂ.9.00 ಲಕ್ಷಗಳನ್ನು ಎಫ್‌ಕೆಸಿಸಿಐ ರವರಿಗೆ ಬಿಡುಗಡೆ ಮಾಡಲಾಗಿದೆ.
- ತುಮಕೂರಿನಲ್ಲಿ ಕೃಷಿ ಹಾಗೂ ಕೈಗಾರಿಕಾ ವಸ್ತುಪ್ರದರ್ಶನವನ್ನು ಆಯೋಜಿಸಲು ರೂ.10.00 ಲಕ್ಷಗಳನ್ನು ಶ್ರೀ ಸಿದ್ಧಗಂಗಾಮಠ, ತುಮಕೂರು ರವರಿಗೆ ಬಿಡುಗಡೆ ಮಾಡಲಾಗಿದೆ.
- ಮಂಡ್ಯ ಜಿಲ್ಲೆಯಲ್ಲಿರುವ ಆದಿಚುಂಚನಗಿರಿ ಮಠ, ಜೆ.ಎಸ್.ಎಸ್.ಮೈಸೂರು ಹಾಗೂ ತುಮಕೂರು ಜಿಲ್ಲೆಯಲ್ಲಿರುವ ಶ್ರೀ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಮಠ, ರವರಿಗೆ ವಸ್ತು ಪ್ರದರ್ಶನವನ್ನು ಆಯೋಜಿಸಲು ಒಟ್ಟು ರೂ.17.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
- ವಸ್ತು ಪ್ರದರ್ಶನ, ಪ್ರಚಾರ ಹಾಗೂ ಮಾರುಕಟ್ಟೆ ವೆಚ್ಚಕ್ಕಾಗಿ ರೂ.10.00 ಲಕ್ಷಗಳನ್ನು ಕೆ.ವಿ.ಐ.ಬಿ. ಮಂಡಳಿಗೆ ಬಿಡುಗಡೆ ಮಾಡಲಾಗಿದೆ.

**ಉ) ಪ್ರಚಾರ ಮತ್ತು ಪ್ರಕಟಣೆ– (ಕೈಗಾರಿಕಾ ಸಂಘಗಳು ಸರ್ಕಾರೇತರ ಸಂಸ್ಥೆಗಳು):** ಒಟ್ಟು **ರೂ.241.69** ಲಕ್ಷಗಳನ್ನು ಈ ಉಪ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

- **ವಿ.ಐ.ಟಿ.ಸಿ: "ಸಾಧನಾ ಸಮಾವೇಶ"** ದಲ್ಲಿ ವಸ್ತು ಪ್ರದರ್ಶನವನ್ನು ಆಯೋಜಿಸಲು ರೂ.2.50 ಲಕ್ಷಗಳನ್ನು ಹಾಗೂ "5ನೇ Vibrant Gujarat Global 2011 ಸಮಿತಿ" ಗಾಗಿ ರೂ.10.00 ಲಕ್ಷಗಳನ್ನು ವಿ.ಐ.ಟಿ.ಸಿ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

- **ಕರ್ನಾಟಕ ಉದ್ಯೋಗ ಮಿತ್ರ:** ಸಂಸ್ಥೆಗೆ ಈ ಕೆಳಗಿನ ಸಮಾವೇಶಗಳಲ್ಲಿ ಭಾಗವಹಿಸಲು ಹಾಗೂ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ ಪ್ರಕಟಣೆಯನ್ನು ನೀಡಲು ಈ ಕೆಳಗಿನಂತೆ ಆಯವ್ಯಯವನ್ನು 2010–11ರಲ್ಲಿ ಬಿಡುಗಡೆ ಮಾಡಲಾಗಿದೆ.

| | |
|---|---|
| 1. ಟೆನಾಂಜಿನ್, ಚೈನಾದಲ್ಲಿ ನಡೆದ ವಾರ್ಷಿಕ ಸಭೆ 2010ರಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಶಾಂಘಾಯ್, ಚೈನಾದಲ್ಲಿ ಏರ್ಪಡಿಸಲಾದ ಗ್ಲೋಬಲ್ ಎಕ್ಸ್‌ಪೋದಲ್ಲಿ ಭಾಗವಹಿಸುವುದಕ್ಕಾಗಿ | –ರೂ.34.00 ಲಕ್ಷಗಳು |
| 2. ನ್ಯೂಜೆರ್ಸಿಯಲ್ಲಿ ನಡೆದ 6ನೇ ಅಕ್ಕ ಸಮ್ಮೇಳನದಲ್ಲಿ ಭಾಗವಹಿಸಲು | –ರೂ.70.00 ಲಕ್ಷಗಳು |

3. ಜಕಾರ್ತ, ಇಂಡೋನೇಷಿಯಾದಲ್ಲಿ ನಡೆದ "ಮೇಡ್ ಇನ್ ಇಂಡಿಯಾ" ಪ್ರದರ್ಶನದಲ್ಲಿ ಭಾಗವಹಿಸಲು – ರೂ.1.10 ಲಕ್ಷಗಳು
4. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ ಪೋಬ್ಸ್ ಏಷ್ಯಾ ಮ್ಯಾಗಜಿನ್‌ನಲ್ಲಿ ಪ್ರಚಾರ ಪಡಿಸಲು – ರೂ.33.61 ಲಕ್ಷಗಳು
5. 5ನೇ ವೈಯಬ್ರಂಟ್ ಗುಜರಾತ್ ಗ್ಲೋಬಲ್ ಸಮಿತಿ ಹಾಗೂ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಅಭಿವೃದ್ಧಿ ಹಂತಗಳ ಬಗ್ಗೆ ಪ್ರಚಾರ ಪಡಿಸಲು – 70.00 ಲಕ್ಷಗಳು

**ಊ) ಕಲಾ ವೈಭವ ವಸ್ತುಪ್ರದರ್ಶನ:** ಜಿಲ್ಲೆಗಳಲ್ಲಿ ನಡೆಯುವ ಕಲಾವೈಭವ ವಸ್ತುಪ್ರದರ್ಶನಗಳಿಗೆ ಅರ್ಬನ್ ಹಾಥ್ ಯೋಜನೆಯಡಿಯಲ್ಲಿ ಆಯವ್ಯಯವನ್ನು ಬಿಡುಗಡೆ ಮಾಡಲಾಗುತ್ತದೆ. 2010–11ರಲ್ಲಿ ಈ ಕೆಳಗಿನಂತೆ ಆಯವ್ಯಯ ಹಂಚಿಕೆಯಾಗಿದೆ.

1. ಜೆ.ಎಸ್.ಎಸ್. ಸಂಸ್ಥೆಯವರು ಮೈಸೂರಿನಲ್ಲಿ ನಡೆದ ವಸ್ತುಪ್ರದರ್ಶನದಲ್ಲಿ ಭಾಗವಹಿಸಿದ್ದಕ್ಕಾಗಿ ಆ ಸಂಸ್ಥೆಗೆ ರೂ.3.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
2. ದಾವಣಗೆರೆ ಜಿಲ್ಲೆಯಲ್ಲಿ ನಡೆದ ಕಲಾವೈಭವದ ವೆಚ್ಚಕ್ಕಾಗಿ ರೂ.3.50 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆಯವರಿಗೆ ಬಿಡುಗಡೆ ಮಾಡಲಾಗಿದೆ.
3. ಗದಗ, ತುಮಕೂರು ಹಾಗೂ ಕಾರವಾರ ಜಿಲ್ಲೆಗಳಲ್ಲಿ ನಡೆದ ಕಲಾವೈಭವ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದ ವೆಚ್ಚಕ್ಕಾಗಿ ರೂ.10.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. (ಪ್ರತಿ ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ರೂ.3.50 ಲಕ್ಷದಂತೆ)

**ಋ) ವೆಂಡರ್ ಅಭಿವೃದ್ಧಿ ಕಾರ್ಯಕ್ರಮಗಳು:** ವಿಭಾಗೀಯ ಮಟ್ಟದ ವೆಂಡರ್ ಅಭಿವೃದ್ಧಿ ಕಾರ್ಯಕ್ರಮಗಳನ್ನು ಧಾರವಾಡ ಜಿಲ್ಲೆಯಲ್ಲಿ ನಡೆಸಲು ವಿಐಟಿಸಿಗೆ, ಪೀಣ್ಯ ಕೈಗಾರಿಕಾ ಸಂಘ ಮತ್ತು ಕೆಸಿಟಿಯು ಸಂಸ್ಥೆಗೆ ಒಟ್ಟು **ರೂ.9.25** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

## 3) ಅರ್ಬನ್ ಹಾಥ್ ಮತ್ತು ಶಾಶ್ವತ ವಸ್ತು ಪ್ರದರ್ಶನ ಕೇಂದ್ರಗಳ ಸ್ಥಾಪನೆ: ಲೆಕ್ಕ ಶೀರ್ಷಿಕೆ 2852–80–800–0–47

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 345.00 | 280.00 | 280.00 |

ಭಾರತ ಸರ್ಕಾರವು ದೇಶದ ಪ್ರಮುಖ ಸ್ಥಳಗಳಲ್ಲಿ ವಸ್ತು ಪ್ರದರ್ಶನಗಳನ್ನು ಏರ್ಪಡಿಸುವುದರ ಮುಖಾಂತರ ಕರಕುಶಲ ಕರ್ಮಿಗಳು ಹಾಗೂ ನೇಯ್ಗೆಯವರು ತಯಾರಿಸಿದ ವಸ್ತುಗಳನ್ನು ನೇರವಾಗಿ ಗಿರಾಕಿಗಳಿಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಕೇಂದ್ರ ಸರ್ಕಾರವು ಈ ವಸ್ತು ಪ್ರದರ್ಶನಗಳಿಗೆ ಶೇ.70 ರಷ್ಟು ಅಂದರೆ ರೂ.300.00 ಲಕ್ಷಗಳ ಯೋಜನಾ ವೆಚ್ಚವಿರುವ ಪ್ರಸ್ತಾವನೆಗಳಿಗೆ ರೂ.210.00 ಲಕ್ಷಗಳನ್ನು ನೀಡಿರುತ್ತದೆ.

2010–11ನೇ ಸಾಲಿನಲ್ಲಿ ಅರ್ಬನ್ ಹಾಥ್ ಯೋಜನೆಗೆ ರೂ.450.00 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿತ್ತು. ಅದರಲ್ಲಿ ರೂ.105.00 ಲಕ್ಷಗಳನ್ನು ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ ಯೋಜನೆಗೆ ಪುನರ್ ವಿನಿಯೋಗ ಮಾಡಲಾಗಿದೆ.

ಈ ಯೋಜನೆಗೆ **ರೂ.280.00** ಲಕ್ಷಗಳನ್ನು ಈ ಕೆಳಗಿನ ಉದ್ದೇಶಗಳಿಗೆ ಬಿಡುಗಡೆ ಮಾಡಲಾಗಿದೆ.

ಎ) ವಿವಿದೋದ್ದೇಶ ಖಾಯಂ ವಸ್ತುಪ್ರದರ್ಶನ ಕೇಂದ್ರ, ಹುಬ್ಬಳ್ಳಿ–ಧಾರವಾಡಕ್ಕೆ ರೂ.50.00 ಲಕ್ಷಗಳು.

ಬಿ) ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮಕ್ಕೆ, ಬೆಂಗಳೂರಿನಲ್ಲಿರುವ ಫ್ರೀಡಂ ಪಾರ್ಕ್ ಮೆಟ್ರೋ ಹಬ್ ನ ಸ್ಥಾಪನೆ ಮತ್ತು ವಿನ್ಯಾಸಕ್ಕಾಗಿ ರೂ.50.00 ಲಕ್ಷಗಳು.

ಸಿ) ಮಲೆನಾಡು ಪ್ರದೇಶವಾದ ಶಿವಮೊಗ್ಗ ಜಿಲ್ಲೆಯಲ್ಲಿ ವಿವಿದೋದ್ದೇಶ ಖಾಯಂ ವಸ್ತು ಪ್ರದರ್ಶನ ಹಾಗೂ ಮಾರಾಟ ಕೇಂದ್ರಕ್ಕಾಗಿ ರೂ.50.00 ಲಕ್ಷಗಳು.

## 4) ವಿಶೇಷ ಘಟಕ ಯೋಜನೆ: ಲೆಕ್ಕ ಶೀರ್ಷಿಕೆ:2852–80–789–0–00

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 310.50 | 243.00 | 243.00 |

**ರೂ.243.00** ಲಕ್ಷಗಳನ್ನು 93 ಪರಿಶಿಷ್ಟ ಜಾತಿಯ ಉದ್ಯಮಿಗಳಿಗೆ ಹಂಚಿಕೆಯಾದ 105 ನಿವೇಶನ/ಮಳಿಗೆಗಳಿಗೆ ಸಹಾಯಧನವನ್ನು ನೀಡಲು ಕೆಎಸ್ಎಸ್ಐಡಿಸಿ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. (ಶೇ.40 ರಷ್ಟು ನಿವೇಶನದ ವೆಚ್ಚ ಅಂದರೆ ಗರಿಷ್ಟ ರೂ.5.00 ಲಕ್ಷ ಪ್ರತಿ ಉದ್ಯಮಿದಾರರಿಗೆ)

## 5) ಗಿರಿಜನ ಉಪ ಯೋಜನೆ: ಲೆಕ್ಕ ಶೀರ್ಷಿಕೆ:2852–80–796–0–01

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 40.25 | 30.00 | 30.00 |

**ರೂ.30.00** ಲಕ್ಷಗಳನ್ನು 22 ಪರಿಶಿಷ್ಟ ಪಂಗಡ ಉದ್ಯಮಿಗಳಿಗೆ ಹಂಚಿಕೆಯಾದ 22 ನಿವೇಶನ/ಮಳಿಗೆಗಳಿಗೆ ಸಹಾಯಧನವನ್ನು ನೀಡಲು ಕೆಎಸ್ಎಸ್ಐಡಿಸಿ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. (ಶೇ.40 ರಷ್ಟು ನಿವೇಶನದ ವೆಚ್ಚ ಅಂದರೆ ಗರಿಷ್ಟ ರೂ.5.00 ಲಕ್ಷ ಪ್ರತಿ ಉದ್ಯಮಿದಾರರಿಗೆ)

## II. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳ ವಲಯ

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ರಾಜ್ಯದಲ್ಲಿನ ಸಣ್ಣ ಪ್ರಮಾಣದ ಕೈಗಾರಿಕೆಗಳ ಗಣತಿ– ಕೇಂದ್ರ ವಲಯ ಯೋಜನೆ | 127.00 | 46.54 | 46.54 |
| 2 | ಮಾರುಕಟ್ಟೆ ಅಭಿವೃದ್ಧಿ ಸಹಾಯ– ನಾರಿನ ವಲಯ | 81.93 | 81.93 | 81.93 |
| 3 | ಕೆ.ಎಸ್.ಎಫ್.ಸಿ.ಗೆ ಸಂಪನ್ಮೂಲ ಬೆಂಬಲ | 2320.00 | 2319.29 | 2319.29 |
| 4 | ಆಧುನೀಕರಣ, ತಾಂತ್ರಿಕ, ಉನ್ನತೀಕರಣ ಹಾಗೂ ತರಬೇತಿ | 2011.43 | 1731.18 | 1731.18 |
| 5 | ವಿಶೇಷ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳು | 220.00 | 220.00 | 220.00 |
| 6 | ಜಿಲ್ಲಾ ಕೈಗಾರಿಕಾ ಕೇಂದ್ರಗಳ ಕಟ್ಟಡ ಹಾಗೂ ವಸತಿ ಗೃಹಗಳ ನಿರ್ಮಾಣ | 150.00 | 147.28 | 147.28 |
| 7 | ರೋಗಗ್ರಸ್ತ ಸಣ್ಣ ಕೈಗಾರಿಕೆಗಳ ಪುನಶ್ಚೇತನ | 10.00 | 2.50 | 2.50 |
| 8 | ಕೈಗಾರಿಕಾ ವಿಕಾಸ | 727.00 | 692.59 | 692.59 |
| 9 | ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ ಯೋಜನೆ | 605.00 | 467.75 | 467.75 |
| 10 | ಖಾದಿ ಮತ್ತು ಸಣ್ಣ ಕೈಗಾರಿಕಾ ಉತ್ಪನ್ನಗಳ ಮಾರಾಟದ ಮೇಲೆ ರಿಯಾಯಿತಿ | 548.13 | 548.13 | 548.13 |
| 11 | ಆಭರಣ ತರಬೇತಿ ಸಂಸ್ಥೆ | 100.00 | 100.00 | 100.00 |
| 12 | ಹೊಸ ಔದ್ಯಮಿಕ ಸಮೂಹಗಳ ಸ್ಥಾಪನೆ (ಎಸ್.ಸಿ.ಪಿ/ಟಿ.ಎಸ್.ಪಿ/ಎಸ್.ಡಿ.ಪಿ) | 2320.80 | 1294.97 | 1294.97 |
| 13 | ಆಹಾರ ಪಾರ್ಕ್‌ಗಳು | 772.50 | 450.00 | 450.00 |
| 14 | ಲಿಡ್ಕರ್ – ಬಂಡವಾಳ ಹೂಡಿಕೆ | 250.00 | 250.00 | 250.00 |
| 15 | **(ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು) ಒಟ್ಟು** | **10243.79** | **8352.16** | **8352.16** |
| 16 | **ಹೊಸ ಯೋಜನೆಗಳು** | | | |
| 17 | ಆಹಾರ ಸಂಸ್ಕರಣಾ ಘಟಕಗಳಿಗೆ ಬಂಡವಾಳ ಹೂಡಿಕೆ | 500.00 | 250.00 | 250.00 |
| 18 | ಕರಕುಶಲ ಗುರುಕುಲ ತರಬೇತಿ ಸಂಸ್ಥೆ ನಿರ್ಮಾಣ | 500.00 | 50.00 | 50.00 |
| 19 | ಸಣ್ಣ ಮಧ್ಯಮ ಉದ್ಯಮಗಳಿಗೆ ಆಪತ್ ಬಂಡವಾಳ ನಿಧಿ ಯೋಜನೆ | **100.00** | **100.00** | **100.00** |
| | **ಒಟ್ಟು** | **1100.00** | **400.00** | **400.00** |
| | **(ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳ ವಲಯ ಮತ್ತು ಹೊಸ ಯೋಜನೆಗಳು) ಒಟ್ಟು ಮೊತ್ತ** | **11343.79** | **8752.16** | **8752.16** |

**1) ಕೇಂದ್ರ ವಲಯ ಯೋಜನೆ–ರಾಜ್ಯದಲ್ಲಿನ ಸಣ್ಣ ಪ್ರಮಾಣದ ಕೈಗಾರಿಕೆಗಳ ಗಣತಿ: ಲೆಕ್ಕ ಶೀರ್ಷಿಕೆ 2851–00–102–0–10**

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 127.00 | 46.54 | 46.54 |

ಕೇಂದ್ರ ಸರ್ಕಾರವು ಈ ಯೋಜನೆಯಡಿಯಲ್ಲಿ ಅಂದರೆ ನ್ಯೂಕ್ಲಿಯಸ್ ಸೆಲ್‌ನಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ಮತ್ತು ಗಣತಿದಾರರ ಸಂಬಳ ಮತ್ತು ಭತ್ಯೆಗಳಿಗಾಗಿ ಹಾಗೂ ಅಖಿಲ ಭಾರತ ಎಂ.ಎಸ್.ಎಂ.ಇ. ಘಟಕಗಳ ಗಣತಿ ಹಾಗು ನೊಂದಣಿಯಾದ ಎಂ.ಎಸ್.ಎಂ.ಇ. ಘಟಕಗಳ ಸ್ಯಾಂಪಲ್ ಸಮೀಕ್ಷೆಯನ್ನು ನಡೆಸಲು ಶೇ. 100 ರಷ್ಟು ಅನುದಾನವನ್ನು ಬಿಡುಗಡೆ ಮಾಡುತ್ತದೆ.

2008–09 ಮತ್ತು 2009–10 ರಲ್ಲಿ ಅಖಿಲ ಭಾರತ 4ನೇ ಎಂ.ಎಸ್.ಎಂ.ಇ. ಗಣತಿ ಹಾಗೂ ಸ್ಯಾಂಪಲ್ ಸರ್ವೆಯನ್ನು ನಡೆಸಲಾಗಿದೆ.

2010–11ನೇ ಸಾಲಿನಲ್ಲಿ ರೂ.46.54 ಲಕ್ಷಗಳನ್ನು ಅಧಿಕಾರಿ ಹಾಗೂ ಸಿಬ್ಬಂದಿಗಳ ಸಂಬಳ/ಪ್ರವಾಸ ಭತ್ಯೆಗಾಗಿ ವೆಚ್ಚ ಮಾಡಲಾಗಿದೆ.

**2) ಮಾರುಕಟ್ಟೆ ಅಭಿವೃದ್ಧಿ ಸಹಾಯ– ನಾರು ಸಹಕಾರ ಸಂಘಗಳು ಹಾಗೂ ನಿಗಮಕ್ಕೆ ಸಹಾಯ: ಲೆಕ್ಕ ಶೀರ್ಷಿಕೆ 2851–00–106–0–11**

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 81.93 | 81.93 | 81.93 |

ಮಾರುಕಟ್ಟೆ ಅಭಿವೃದ್ಧಿ ಸಹಾಯವು ಒಂದು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ. ಈ ಯೋಜನೆಯ ವೆಚ್ಚವನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರವು 50:50 ಆಧಾರದ ಮೇಲೆ ಭರಿಸುತ್ತವೆ. ಈ ಯೋಜನೆಯು ಪ್ರಾಥಮಿಕ ನಾರು ಸಹಕಾರ ಸಂಘಗಳು ಮಾಡುವ ಹಿಂದಿನ 3 ವರ್ಷದ ವ್ಯಾಪಾರ ವಹಿವಾಟಿನ ಶೇ.10 ರಷ್ಟು ಭಾಗವನ್ನು ನೀಡುವುದಾಗಿರುತ್ತದೆ. ಈ ಯೋಜನೆಗಾಗಿ **ರೂ.81.93** ಲಕ್ಷಗಳನ್ನು 2010–11 ರಲ್ಲಿ ಕರ್ನಾಟಕ ನಾರು ಸಹಕಾರ ಮಹಾ ಮಂಡಳ ಹಾಗೂ ಕರ್ನಾಟಕ ರಾಜ್ಯ ನಾರು ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

**3) ಕೆ.ಎಸ್.ಎಫ್.ಸಿ.ಗೆ ಸಂಪನ್ಮೂಲ ಬೆಂಬಲ: ಲೆಕ್ಕ ಶೀರ್ಷಿಕೆ 2851–00–102–0–68**

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 2320.00 | 2319.29 | 2319.29 |

ಕೆ.ಎಸ್.ಎಫ್.ಸಿ.ಯು ಸರ್ಕಾರದ ಪರವಾಗಿ ರೂ. 8100.00 ಲಕ್ಷಗಳನ್ನು ಖಾಸಗಿ ಬಾಂಡುಗಳ ಮುಖಾಂತರ 2004ರ ಏಪ್ರಿಲ್ ಮತ್ತು ಮೇ ನಲ್ಲಿ ಸಂಗ್ರಹಿಸಿ ಅದನ್ನು ಬಾಕಿ

ಉಳಿದಿರುವ ರಾಜ್ಯ ಸಹಾಯಧನಕ್ಕಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ವಿತರಿಸಿದೆ. ಈ ಬಾಂಡ್‌ಗಳಿಗೆ 18-5-2004 ರಿಂದ 7 ವರ್ಷಗಳ ಅವಧಿ ಇದ್ದು, 5, 6, ಮತ್ತು 7ನೇ ವರ್ಷಗಳಲ್ಲಿ ಅನುಕ್ರಮವಾಗಿ ಶೇ.30, ಶೇ.30 ಹಾಗೂ ಶೇ.40ರಷ್ಟು ಹಣವನ್ನು ಬಿಡುಗಡೆ ಮಾಡಿ ಬಾಂಡುಗಳನ್ನು ಬಿಡಿಸಿಕೊಳ್ಳಬೇಕಾಗಿರುತ್ತದೆ. ಈ ಬಾಂಡ್‌ಗಳ ಮೇಲಿನ ಬಡ್ಡಿಯನ್ನು ಆರು ತಿಂಗಳಿಗೊಮ್ಮೆ ಅಂದರೆ 1ನೇ ಏಪ್ರಿಲ್ ಹಾಗೂ 1ನೇ ಆಕ್ಟೋಬರ್ ರಂದು ಪ್ರತಿ ವರ್ಷ ಪಾವತಿಸಬೇಕಾಗಿರುತ್ತದೆ. ನಾಲ್ಕು ವರ್ಷಗಳಾದ ನಂತರ ದಿನಾಂಕ:18-06-2008ರಲ್ಲಿ ಚಲಾಯಿಸಿದ ಪುಟ್ ಅಂಡ್ ಕಾಲ್ ಆಯ್ಕೆಯನ್ವಯ ರೂ.1040.00 ಲಕ್ಷಗಳ 14 ಅರ್ಧ ವಾರ್ಷಿಕ ಬಡ್ಡಿಯ ಕಂತನ್ನು ಪಾವತಿಸಿರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ.2320.00 ಲಕ್ಷಗಳ ಆಯವ್ಯಯವನ್ನು ಒದಗಿಸಿದ್ದು, ಅದರಲ್ಲಿ **ರೂ.2319.29 ಲಕ್ಷಗಳು** ಬಿಡುಗಡೆಯಾಗಿದೆ. ಕೆ.ಎಸ್.ಎಫ್.ಸಿಯು ಬಾಕಿ ಉಳಿದ ಸಹಾಯಾನುದಾನದ ಬಾಬ್ತಿಗಾಗಿ ಸಂಗ್ರಹಿಸಿದ್ದ ಬಾಂಡುಗಳ ಮೇಲಿನ ಅಸಲು ಮತ್ತು ಬಡ್ಡಿ ಹಣವನ್ನು ಪಾವತಿಸಿದೆ.

**4) ಆಧುನೀಕರಣ, ತಾಂತ್ರಿಕ, ಉನ್ನತೀಕರಣ ಹಾಗೂ ತರಬೇತಿ –**
**ಲೆಕ್ಕ ಶೀರ್ಷಿಕೆ 2851-00-102-0-69 – ರೂ. 2011.43 ಲಕ್ಷ**

| ಕ್ರಮ ಸಂಖ್ಯೆ | ಉಪಯೋಜನೆಗಳ ಹೆಸರು | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|
| ಎ | ಎಸ್.ಸಿ.ಪಿ | 500.00 | 426.98 |
| ಬಿ | ಟಿ.ಎಸ್.ಪಿ. | 200.00 | 110.26 |
| ಸಿ | ಕೆ.ಸಿ.ಟಿ.ಯು. | 45.00 | 16.00 |
| ಡಿ | ಸಿಡಾಕ್ | 25.00 | 25.00 |
| ಇ | ಅವೇಕ್ | 25.00 | 5.00 |
| ಎಫ್ | ಅಧಿಕಾರಿಗಳ ಪ್ರವಾಸ, ತರಬೇತಿ ಮತ್ತು ವಿಚಾರ ಸಂಕಿರಣಗಳಿಗೆ | 60.00 | 60.00 |
| ಜಿ | ಜಿಲ್ಲಾ ಕೈಗಾರಿಕಾ ಕೇಂದ್ರಗಳ ಹಾಗೂ ನಿರ್ದೇಶನಾಲಯದ ಆದುನೀಕರಣ/ಗಣಕೀಕರಣ | 55.00 | 51.48 |
| ಹೆಚ್ | ಕಿಲ್ಟ್ | 67.00 | 67.00 |
| ಐ | ಕೆ.ಎಸ್.ಹೆಚ್.ಡಿ.ಸಿ. | 50.00 | 50.00 |
| ಜೆ | ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ | 50.00 | 125.00 |
| ಕೆ | ಕರ್ನಾಟಕ ರಾಜ್ಯ ತೆಂಗಿನ ನಾರಿನ ಮಹಾಮಂಡಳಿ | 50.00 | 50.00 |
| ಎಲ್ | ರೂಡ್‌ಸೆಟಿಗಳು | 15.00 | 15.00 |
| ಎಂ | ವಿಶ್ವಯೋಜನೆಯ ಮೂಲಭೂತ ಸೌಕರ್ಯಗಳು, ತರಬೇತಿ | 15.00 | 15.00 |
| ಎನ್ | ಕಾಯಕನಗರ | 161.07 | 161.07 |
| ಒ | ಕರ್ನಾಟಕ ಉದ್ಯೋಗ ಮಿತ್ರ | 20.00 | 20.00 |
| ಪಿ | ಜಿ.ಟಿ.ಟಿ.ಸಿ. | 165.00 | 165.00 |
| ಕ್ಯೂ | ಸಿಪೆಟ್ | 50.00 | 73.78 |
| ಆರ್ | ಕೆ.ಎಸ್.ಎಫ್.ಸಿ.ತಂತ್ರಜ್ಞಾನ ಉನ್ನತೀಕರಣ | 174.00 | 174.00 |
| ಎಸ್ | ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಕೈಗಾರಿಕೆಗಳ | 60.00 | 6.11 |

| | | | |
|---|---|---|---|
| | ಸಮೂಹಗಳ ಸ್ಥಾಪನೆ | | |
| ಟಿ | ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು | 20.00 | 19.95 |
| ಯು | ಸ್ಟೆಪ್ಸ್ ಗೆ ಬೆಂಬಲ | 15.00 | 0.00 |
| ವಿ | ಕೃಪಡ್ಸ್ | 19.00 | 19.00 |
| ಡಬ್ಲ್ಯೂ | ಕಾಸಿಯಾಕ್ಕೆ ಸಹಾಯ | 50.00 | 50.00 |
| ಎಕ್ಸ್ | ರೋಗಗ್ರಸ್ತ ಕೈಗಾರಿಕೆಗಳ ಪುನ:ಶ್ಚೇತನಕ್ಕಾಗಿ ಎಸ್ಕಾಂ ಸಂಸ್ಥೆಗೆ ಕೈಗಾರಿಕೆಗಳು ಮುಚ್ಚಿದ ಅವಧಿಗೆ ಡಿಮಾಂಡ್ ಹಾಗೂ ಫಿಕ್ಸೆಡ್ ವೆಚ್ಚವನ್ನು ನೀಡುವುದು. | 40.00 | 6.07 |
| ವೈ | ಇತರೆ | 80.36 | 19.83 |
| | **ಒಟ್ಟು** | **2011.43** | **1731.19** |

**ಎ) ಎಸ್.ಸಿ.ಪಿ:** ರೂ.426.98 ಲಕ್ಷಗಳನ್ನು ಈ ಯೋಜನೆಯಡಿಯಲ್ಲಿ ಲಿಡ್ಕರ್, ಸಿಪೆಟ್, ಜಿಟಿಟಿಸಿ, ನಾರು ಅಭಿವೃದ್ಧಿ ನಿಗಮ, ನಾರು ಸಹಕಾರ ಸಂಘಗಳ ಮಹಾಮಂಡಳಿ ಹಾಗೂ ಸಿಡಾಕ್ ವತಿಯಿಂದ 1749 ಫಲಾನುಭವಿಗಳಿಗೆ ವಿವಿಧ ವೃತ್ತಿಗಳಲ್ಲಿ ಆಧುನೀಕರಣ ತರಬೇತಿ ನೀಡಲಾಗಿದೆ ಹಾಗೂ 92 ಫಲಾನುಭವಿಗಳಿಗೆ ಕೆಐಎಡಿಬಿ ವತಿಯಿಂದ ನಿವೇಶನ ಹಂಚಿಕೆ ಮೇಲೆ ಸಹಾಯಧನ ಬಿಡುಗಡೆ ಮಾಡಲಾಗಿದೆ. ಒಟ್ಟು 1841 ಫಲಾನುಭವಿಗಳಿಗೆ ಸಹಾಯ ಸಲ್ಲಿಸಲಾಗಿದೆ.

**ಬಿ) ಟಿ.ಎಸ್.ಪಿ:** ರೂ.110.26 ಲಕ್ಷಗಳನ್ನು ಈ ಉಪ ಯೋಜನೆಯಡಿಯಲ್ಲಿ ಸಿಪೆಟ್, ಜಿಟಿಟಿಸಿ, ನಾರು ಅಭಿವೃದ್ಧಿ ನಿಗಮ, ನಾರು ಸಹಕಾರ ಸಂಘಗಳ ಮಹಾಮಂಡಳ ಹಾಗೂ ಸಿಡಾಕ್ ವತಿಯಿಂದ ವಿವಿಧ ವೃತ್ತಿಗಳಲ್ಲಿ 303 ಫಲಾನುಭವಿಗಳಿಗೆ ಆಧುನೀಕರಣ ತರಬೇತಿ ನೀಡಲಾಗಿದೆ ಹಾಗೂ 22 ಫಲಾನುಭವಿಗಳಿಗೆ ಕೆ.ಐ.ಎ.ಡಿ.ಬಿ. ವತಿಯಿಂದ ನಿವೇಶನ ಹಂಚಿಕೆ ಮಾಡಿದ್ದು, ಹಂಚಿಕೆ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ. ಹೀಗೆ ಒಟ್ಟು 325 ಫಲಾನುಭವಿಗಳಿಗೆ ಸಹಾಯ ಕಲ್ಪಿಸಲಾಗಿದೆ.

**ಸಿ) ಕೆ.ಸಿ.ಟಿ.ಯು.:** ಎಂ.ಎಸ್.ಎಂ.ಇ. ಉತ್ಪಾದನಾ ಘಟಕಗಳಿಗೆ ಐ.ಎಸ್.ಓ. ಪ್ರಮಾಣ ಪತ್ರ ಪಡೆಯಲು ರೂ.16.00 ಲಕ್ಷಗಳ ಸಹಾಯಧನವನ್ನು ಕೆಸಿಟಿಯು ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

**ಡಿ) ಸಿಡಾಕ್:** ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಇತರೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಿಡಾಕ್ ಸಂಸ್ಥೆಗೆ ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಇ) ಅವೇಕ್:** ಗುಲ್ಬರ್ಗ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವೇಕ್ ಸಂಸ್ಥೆಗೆ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಎಫ್) ಅಧಿಕಾರಿಗಳ ಪ್ರವಾಸ, ತರಬೇತಿ ಮತ್ತು ವಿಚಾರ ಸಂಕೀರ್ಣಗಳಿಗೆ:** ಇಲಾಖಾ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ತರಬೇತಿ, ವಿಚಾರ ಸಂಕಿರಣ, ಅದ್ಯಯನ ಪ್ರವಾಸ ಮುಂತಾದ ಪ್ರೇರೇಪಣಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಕುಶಲತೆಯನ್ನು ಉನ್ನತೀಕರಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಉದ್ದೇಶಕ್ಕಾಗಿ ಟೆಕ್ಸಾಕ್, ಸಿಡಾಕ್ ಹಾಗೂ ಜಿಲ್ಲಾ ಕೈಗಾರಿಕಾ

ಕೇಂದ್ರಗಳಿಗೆ ಒಟ್ಟು ರೂ.60.00 ಲಕ್ಷಗಳನ್ನು ಈ ಉಪ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

**ಜಿ) ಜಿಲ್ಲಾ ಕೈಗಾರಿಕಾ ಕೇಂದ್ರಗಳ ಹಾಗೂ ನಿರ್ದೇಶನಾಲಯದ ಆದುನೀಕರಣ/ಗಣಕೀಕರಣ:** ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಹಾಗೂ ನಿರ್ದೇಶನಾಲಯದ ಆಧುನೀಕರಣಕ್ಕಾಗಿ ಕಂಪ್ಯೂಟರ್‌ಗಳನ್ನು, ಯುಪಿಎಸ್‌ಗಳನ್ನು, ಡಿಜಿಟಲ್ ಕಾಪಿಯರ್‌ಗಳನ್ನು ಖರೀದಿಸಲು ಹಾಗು ಸದರಿ ಉಪಕರಣಗಳ ವಾರ್ಷಿಕ ನಿರ್ವಹಣೆ ಗುತ್ತಿಗೆ/ರಿಪೇರಿ, ಹಾಗೂ ಕಚೇರಿಗೆ ಅಗತ್ಯವಾದಂತಹ ಸಲಕರಣೆ, ಲೇಖನ ಸಾಮಗ್ರಿಗಳು, ಮ್ಯಾಗಜಿನ್ ಮತ್ತು ವಾರಪತ್ರಿಕೆಗಳಿಗೆ ಕಂತು ಕಟ್ಟಲು ಒಟ್ಟು ರೂ.51.48 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಹೆಚ್) ಕಿಲ್ಟ್:** ಈ ಸಂಸ್ಥೆಯ ಆಡಳಿತಾತ್ಮಕ ವೆಚ್ಚಕ್ಕಾಗಿ ಹಾಗೂ ಚರ್ಮ ಹಾಗೂ ತರಬೇತಿಗಾಗಿ ನೀಡಲು ರೂ. 67.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

**ಐ) ಕೆ.ಎಸ್.ಹೆಚ್.ಡಿ.ಸಿ:** ಸದರಿ ಸಂಸ್ಥೆಗೆ ರೂ.50.00 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದೆ. ಈ ಹಣವನ್ನು ವಿಶಿಷ್ಟ ಕಲಾ ವಸ್ತುಗಳ ಮಾರಾಟದ ಮೇಲೆ ರಿಬೇಟ್ ನೀಡಲು ಹಾಗೂ ಕುಶಲಕರ್ಮಿಗಳಿಗೆ ಕಚ್ಚಾ ಸಾಮಗ್ರಿಗಳ ಮೇಲೆ ರಿಬೇಟ್ ನೀಡುವುದಕ್ಕೆ ಹಾಗೂ ಕಲಾ ಸಂಕಿರಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು, ರಫ್ತು ಉತ್ತೇಜನ ಚಟುವಟಿಕೆ ಹಾಗೂ ವಿನ್ಯಾಸ ಕೇಂದ್ರಗಳ ನಿರ್ವಹಣೆ ಹಾಗೂ ಸ್ಥಾಪನೆಗಾಗಿ ಬಿಡುಗಡೆಗೊಳಿಸಲಾಗಿದೆ.

**ಜೆ) ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ:** ಈ ನಿಗಮಕ್ಕೆ ಉತ್ಪಾದನಾ ಕೇಂದ್ರಗಳ ಆಧುನೀಕರಣ, ದುರಸ್ತಿ ಮತ್ತು ನಿರ್ವಹಣೆಗಾಗಿ, ಹಿಂದಿನ ವರ್ಷಗಳಲ್ಲಿ ನಾರು ಉತ್ಪಾದನೆಯ ಮಾರಾಟದ ಮೇಲೆ ನೀಡಿರುವ ರಿಬೇಟ್ ಹಣದ ಪಾವತಿಗಾಗಿ, ಹಾಗೂ ಪ್ರಸ್ತುತ ಇರುವ ಕೇಂದ್ರಗಳ ಆಧುನೀಕರಣಕ್ಕಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಒಟ್ಟು ಬಿಡುಗಡೆಯಾದ ರೂ.125.00 ಲಕ್ಷಗಳಲ್ಲಿ ರೂ.75.00 ಲಕ್ಷಗಳನ್ನು ದುಡಿಮೆ ಬಂಡವಾಳಕ್ಕಾಗಿ ಬಿಡುಗಡೆ ಮಾಡಲಾಗಿದೆ.

**ಕೆ) ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರಿ ಮಹಾಮಂಡಳ ನಿಯಮಿತ:** ಈ ಮಹಾಮಂಡಳಿಗೆ ರೂ.50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾದ ಹಣದಲ್ಲಿ ರೂ.25.00 ಲಕ್ಷಗಳನ್ನು ದುಡಿಮೆ ಬಂಡವಾಳಕ್ಕಾಗಿ ಬಿಡುಗಡೆಗೊಳಿಸಲಾಗಿದೆ. ಉಳಿದ ಹಣದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು, ಹಾಗೂ ಹಾಲಿ ಇರುವ ಉತ್ಪಾದನಾ ಕೇಂದ್ರಗಳ ದುರಸ್ತಿ ಮತ್ತು ನಿರ್ವಹಣೆ ಮಾಡಲು ಹಾಗೂ ಹೊಸ ಯಂತ್ರೋಪಕರಣಗಳ ಖರೀದಿಗಾಗಿ ಹಾಗೂ ರೂರಲ್ ಫೀಡರ್‌ನ್ನು ಟೌನ್ ಫೀಡರ್ ಆಗಿ ಬದಲಾಯಿಸಿ ಹೆಚ್ಚು ಉತ್ಪಾದನೆ ಪಡೆಯಲು ಹಾಸನ ಜಿಲ್ಲೆಯ ಡುಬ್ಬಾ ಕೇಂದ್ರದಲ್ಲಿ ಅಳವಡಿಸಲಾಗಿದೆ.

**ಎಲ್) ರೂಡ್‌ಸೆಟಿ ಸಂಸ್ಥೆಗಳು:** ಈ ಯೋಜನೆಯಡಿಯಲ್ಲಿ ಒಟ್ಟು **ರೂ.15.00** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ರೂ.2.39 ಲಕ್ಷಗಳನ್ನು ಹಾವೇರಿ ಜಿಲ್ಲೆಯ ವಿಬ್‌ಸೆಟ್ಟಿಗೆ ಕಟ್ಟಡದ ನಿರ್ಮಾಣವನ್ನು ಪೂರ್ಣಗೊಳಿಸಲು ಹಾಗೂ ಉದ್ಯೋಗ ತರಬೇತಿಯನ್ನು ನೀಡಲು ಬಿಡುಗಡೆಗೊಳಿಸಲಾಗಿದೆ. ರೂ.12.61 ಲಕ್ಷಗಳನ್ನು ದಾವಣಗೆರೆಯ ಕೆನರಾ ಬ್ಯಾಂಕ್ ರೂಡ್‌ಸೆಟಿಗೆ ಕಟ್ಟಡ ನಿರ್ಮಾಣ ಪೂರ್ಣಗೊಳಿಸಲು ಹಾಗೂ ಸ್ವ ಉದ್ಯೋಗದ ತರಬೇತಿ ನೀಡಲು ಬಿಡುಗಡೆಗೊಳಿಸಲಾಗಿದೆ.

**ಎಂ) ವಿಶ್ವಯೋಜನೆಯ ಮೂಲಭೂತ ಸೌಕರ್ಯ ತರಬೇತಿ:** ಈ ಯೋಜನೆಯಡಿಯಲ್ಲಿ **ರೂ.15.00** ಲಕ್ಷಗಳನ್ನು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ, ಹೊಸ ಯಂತ್ರೋಕರಣಗಳ ಖರೀದಿಗೆ ಹಾಗೂ ಕೆಎಸ್ಎಸ್ಐಡಿಸಿ ಸಂಸ್ಥೆಯವರ ಕೈಗಾರಿಕಾ ವಸಾಹತುವಿನ ಬಾಡಿಗೆಗೆ, ಮೈಸೂರು ಜಿಲ್ಲೆಯ ಬಿಲ್ಲವತಾ ಗ್ರಾಮದಲ್ಲಿ ಕುಶಲಕರ್ಮಿಗಳಿಗೆ ವಸತಿ ಕಾರ್ಯಗಾರಗಳನ್ನು ನಿರ್ಮಿಸಿ ಅಗತ್ಯವಾದ ನಾರು ಉತ್ಪಾದನಾ ವಸ್ತುಗಳ ತಯಾರಿಕೆಯ ತರಬೇತಿ ನೀಡಲು ಬಿಡುಗಡೆ ಗೊಳಿಸಲಾಗಿದೆ.

**ಎನ್) ಕಾಯಕನಗರ:** ನಿವೇಶನ ಮತ್ತು ಮನೆ ಇಲ್ಲದ ವೃತ್ತಿಪರ ಕುಶಲಕರ್ಮಿಗಳಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ವಸತಿ ಕಾರ್ಯಗಾರಗಳನ್ನು ನಿರ್ಮಿಸಲು ಹಣವನ್ನು ಈ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲಾಗುತ್ತದೆ. ಮೊದಲನೆ ಹಂತವಾಗಿ ವಸತಿ ಕಾರ್ಯಗಾರಗಳ ನಿರ್ಮಾಣವನ್ನು ಧಾರವಾಡದ ನರೇಂದ್ರ ಗ್ರಾಮದಲ್ಲಿ (200), ಬೆಳಗಾಂ ಜಿಲ್ಲೆಯ ರಾಮದುರ್ಗದಲ್ಲಿ (59) ಹಾಗೂ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿ (89) ಈ 3 ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿದೆ.

ಈ 3 ಜಿಲ್ಲೆಗಳಲ್ಲೂ ಮೂಲ ಭೂತ ಸೌಕರ್ಯಗಳಾದ ರಸ್ತೆ, ಚರಂಡಿ ವ್ಯವಸ್ಥೆ, ಬೀದಿ ದೀಪಗಳ ವ್ಯವಸ್ಥೆ, ನೀರು ಸರಬರಾಜು ಮುಂತಾದ ಕಾರ್ಯಕ್ರಮಗಳನ್ನು ಕೆಎಸ್ಎಸ್ಐಡಿಸಿ ಸಂಸ್ಥೆಯು ನೋಡಿಕೊಳ್ಳುತ್ತಿದೆ. ನರೇಂದ್ರ ಗ್ರಾಮ ಹಾಗೂ ರಾಮದುರ್ಗ ಜಿಲ್ಲೆಗಳಲ್ಲಿ ವಸತಿ ಕಾರ್ಯಗಾರಗಳಿಗೆ ವಿದ್ಯುಶ್ಚಕ್ತಿ ಸರಬರಾಜು, ರಸ್ತೆ ದೀಪ ಹಾಗೂ ಬೋರ್‌ವೆಲ್‌ನ ಅಳವಡಿಕೆಗಾಗಿ **ರೂ.161.07** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ರೂ.161.07 ಲಕ್ಷಗಳಲ್ಲಿ ರೂ.82.55 ಲಕ್ಷಗಳನ್ನು ಧಾರವಾಡದ ನಿರ್ಮಿತಿ ಕೇಂದ್ರಕ್ಕೆ 7 ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ ನರೇಂದ್ರ ಗ್ರಾಮದಲ್ಲಿ ಒಂದು ವಸ್ತುಪ್ರದರ್ಶನ ಕೇಂದ್ರವನ್ನು ಸ್ಥಾಪಿಸಲು ನೀಡಲಾಗಿದೆ.

**ಒ) ಕರ್ನಾಟಕ ಉದ್ಯೋಗ ಮಿತ್ರ:** ವಯಬ್ರೆಂಟ್, ಗುಜರಾತ್ ಸಮಿತಿಯಲ್ಲಿ ಭಾಗವಹಿಸಲು ಹಾಗೂ ದೈನಂದಿನ ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ನೀಡಲು ಕರ್ನಾಟಕ ಉದ್ಯೋಗ ಮಿತ್ರಕ್ಕೆ **ರೂ.20.00** ಲಕ್ಷಗಳನ್ನು ನೀಡಲಾಗಿದೆ.

**ಪಿ) ಜಿ.ಟಿ.ಟಿ.ಸಿ.:** ಈ ಸಂಸ್ಥೆಗೆ ಒಟ್ಟು **ರೂ.165.00** ಲಕ್ಷಗಳನ್ನು ಈ ಕೆಳಕಂಡ ಚಟುವಟಿಕೆಗಳಿಗಾಗಿ ಬಿಡುಗಡೆ ಮಾಡಲಾಗಿದೆ. ರೂ.20.00 ಲಕ್ಷಗಳನ್ನು ಹೈಟೆಕ್ ಪ್ರಿಸಿಶನ್ ಉತ್ಪಾದನೆಗಾಗಿ ಅವಶ್ಯಕತೆ ಇರುವ ಪೂರಕ ಸೌಲಭ್ಯಗಳನ್ನು ಅಳವಡಿಸಲು ಬಿಡುಗಡೆಗೊಳಿಸಿದೆ ಮತ್ತು ತುಮಕೂರು ಉಪ ಕೇಂದ್ರಕ್ಕೆ ಅವಶ್ಯಕತೆಯಿರುವ ಉಪಕರಣಗಳ ಖರೀದಿಗಾಗಿ ರೂ.40.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಬೆಂಗಳೂರಿನಲ್ಲಿ ಮೆಕಾಟ್ರಾನಿಕ್ಸ್ ಮತ್ತು ಪ್ರಿಸಿಶನ್ ತಯಾರಿಕೆಯ ಡಿಪ್ಲೊಮ ಕೋರ್ಸ್‌ಗಳನ್ನು ನಡೆಸಲು ರೂ. 30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಕ್ಯೂ) ಸಿಪೆಟ್:** ಸಿಪೆಟ್ ಸಂಸ್ಥೆಗೆ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕೆ ಹಾಗೂ ಹೊಸ ತರಗತಿ ಕೊಠಡಿಯ ನಿರ್ಮಾಣಕ್ಕೆ ಮತ್ತು ಸಂಸ್ಥೆಯ ಹೆಚ್ಚುವರಿ ಮಹಡಿಯ ನಿರ್ಮಾಣಕ್ಕೆ **ರೂ.73.78** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಆರ್) ಕೆ.ಎಸ್.ಎಫ್.ಸಿ. ತಾಂತ್ರಿಕ ಉನ್ನತೀಕರಣ:** ಈ ಸಂಸ್ಥೆಗೆ **ರೂ.174.00** ಲಕ್ಷಗಳನ್ನು ತಾಂತ್ರಿಕ ಉನ್ನತೀಕರಣಕ್ಕಾಗಿ ಬಿಡುಗಡೆ ಮಾಡಲಾಗಿದೆ.

**ಎಸ್) ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಕೈಗಾರಿಕೆಗಳ ಸಮೂಹಗಳ ಸ್ಥಾಪನೆ:** ಸಿದ್ಧ ಉಡುಪು ತಯಾರಿಕೆಯ ಕೈಗಾರಿಕಾ ಸಮೂಹ ಹುಬ್ಬಳ್ಳಿಯಲ್ಲಿ ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗಾಗಿ ಕೆಸಿಟಿಯು ಸಂಸ್ಥೆಗೆ **ರೂ.6.11** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಟಿ) ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು:** ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮುಖಾಂತರ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲು ಸಿಡಾಕ್ ಸಂಸ್ಥೆಗೆ **ರೂ.19.95** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಯು) ಸ್ಟೆಪ್ಸ್ ಗೆ ಬೆಂಬಲ:** ಈ ಯೋಜನೆಗೆ 2010–11ನೇ ಸಾಲಿನಲ್ಲಿ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ವಿ) **ಕೃಪಡ್ಸ್:** ಸಂಸ್ಥೆಯ ಕಟ್ಟಡ ನಿರ್ಮಾಣಕ್ಕಾಗಿ **ರೂ.19.00** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಡಬ್ಲ್ಯೂ) ಕಾಸಿಯಾಕ್ಕೆ ಸಹಾಯ:** ಕಾಸಿಯಾ ಸಂಸ್ಥೆಗೆ ವಜ್ರ ಮಹೋತ್ಸವವನ್ನು ನಡೆಸಲು ರೂ.10.00 ಲಕ್ಷಗಳನ್ನು, ಪ್ರಾದೇಶಿಕ ಮಟ್ಟದ ಕಾರ್ಯಗಾರಗಳು ಹಾಗೂ ಕೈಗಾರಿಕಾ ಅದಾಲತ್ ನಡೆಸಲು ರೂ.40.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಎಕ್ಸ್) ರೋಗಗ್ರಸ್ತ ಕೈಗಾರಿಕೆಗಳ ಪುನ:ಶ್ಚೇತನಕ್ಕಾಗಿ ಬೆಸ್ಕಾಂ ಸಂಸ್ಥೆಗೆ ಕೈಗಾರಿಕೆಗಳು ಮುಚ್ಚಿದ ಅವಧಿಗೆ ಡಿಮಾಂಡ್ ಹಾಗೂ ಫಿಕ್ಸೆಡ್ ವೆಚ್ಚವನ್ನು ನೀಡುವುದು:** ಮೆ:ಪ್ರಕಾಶ್ ಅಕ್ಕಿ ಮತ್ತು ಹಿಟ್ಟಿನ ಗಿರಣಿ, ಹಿರೇಕೆರೂರು, ಹಾವೇರಿ ಜಿಲ್ಲೆ ಇವರಿಗೆ ಫಿಕ್ಸೆಡ್ ವೆಚ್ಚ ಹಾಗು ಡಿಮಾಂಡ್ ವೆಚ್ಚಗಳನ್ನು ಪುನಃಶ್ಚೇತನಕ್ಕಾಗಿ ಪಾವತಿ ಮಾಡಲು ರೂ.6.07 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ವೈ) ಇತರ ಉದ್ದೇಶಗಳಿಗೆ:** ವಿವಿಧ ಉದ್ದೇಶಗಳಿಗೆ **ರೂ.19.83** ಲಕ್ಷಗಳನ್ನು ಈ ಕೆಳಗಿನ ಚಟುವಟಿಕೆಗಳಿಗೆ ಬಿಡುಗಡೆಗೊಳಿಸಲಾಗಿದೆ.

- ಮೌಲ್ಯ ಮಾಪನ ಅಧ್ಯಯನಕ್ಕಾಗಿ
- ಖಾದಿ ರಿಬೇಟ್ ಯೋಜನೆಗಾಗಿ.
- ಕೈಗಾರಿಕಾ ವಾರ್ತೆ ಮುದ್ರಣಕ್ಕಾಗಿ
- ಬಿಜಾಪುರ, ಬಾಗಲಕೋಟೆ ಮತ್ತು ಗದಗ ಜಿಲ್ಲೆಗಳಲ್ಲಿ ಕೈಗಾರಿಕಾ ಅದಾಲತ್‌ಅನ್ನು ನಡೆಸಲು

## 5. ವಿಶೇಷ ಕುಶಲತೆ ಅಭಿವೃದ್ಧಿ ಸಂಸ್ಥೆಗಳು:
## ಲೆಕ್ಕ ಶೀರ್ಷಿಕೆ 4851–00–102–0–09

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 220.00 | 220.00 | 220.00 |

**ರೂ. 220.00** ಲಕ್ಷಗಳನ್ನು ಜಿ.ಟಿ.ಟಿ.ಸಿ. ಸಂಸ್ಥೆಗೆ ಈ ಕೆಳಗಿನ ಉದ್ದೇಶಗಳಿಗಾಗಿ ಬಿಡುಗಡೆ ಮಾಡಲಾಗಿದೆ.

ಎ) ರೂ.110.00 ಲಕ್ಷಗಳನ್ನು ಜಿ.ಟಿ.ಟಿ.ಸಿ.ಯ ಕನಕಪುರ. ಲಿಂಗಸುಗೂರು ಮತ್ತು ಮಂಗಳೂರು ಕೇಂದ್ರದಲ್ಲಿ ತರಬೇತಿ ಕೇಂದ್ರಗಳ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಲಾಗಿದೆ.

ಬಿ) ರೂ.110.00 ಲಕ್ಷಗಳನ್ನು ಬೆಂಗಳೂರಿನ ಜಿ.ಟಿ.ಟಿ.ಸಿ.ಗೆ ಬಿ.ಟೆಕ್ ಸಂಸ್ಥೆ ಹಾಗೂ ಒಡವೆ ತರಬೇತಿ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಲಾಗಿದೆ.

## 6) ಜಿಲ್ಲಾ ಕೈಗಾರಿಕಾ ಕೇಂದ್ರಗಳ ಕಟ್ಟಡ ಹಾಗೂ ವಸತಿ ಗೃಹಗಳ ನಿರ್ಮಾಣ: ಲೆಕ್ಕ ಶೀರ್ಷಿಕೆ : 4851–00–102–0–12

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 150.00 | 147.28 | 147.28 |

ಎ) ರೂ.10.50 ಲಕ್ಷಗಳನ್ನು ಮಂಗಳೂರಿನ ಜಿಲ್ಲಾ ಕೈಗಾರಿಕಾ ಕೇಂದ್ರಗಳ ರಿಪೇರಿ ಮತ್ತು ಮೂಲಭೂತ ಸೌಕರ್ಯಕ್ಕಾಗಿ ಬಿಡುಗಡೆ ಮಾಡಲಾಗಿದೆ.

ಬಿ) ರೂ.15.00 ಲಕ್ಷಗಳನ್ನು ಬೆಂಗಳೂರು ನಗರ ಜಿಲ್ಲಾ ಕೈಗಾರಿಕಾ ಕೇಂದ್ರದ ಒಳಾಂಗಣ ವಿನ್ಯಾಸಕ್ಕಾಗಿ ನೀಡಲಾಗಿದೆ.

ಸಿ) ರೂ.24.65 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆಯ ಕಚೇರಿಯ ಕಟ್ಟಡ ನಿರ್ಮಾಣದೊಂದಿಗೆ ಹೆಚ್ಚುವರಿಯಾಗಿ ನೆಲಮಹಡಿಯಲ್ಲಿ ವಾಹನ ನಿಲುಗಡೆ ಮತ್ತು ಹೆಚ್ಚುವರಿ ದಾಸ್ತಾನು ಕೊಠಡಿ, ಆವರಣ ಗೋಡೆ ನಿರ್ಮಾಣ ಮತ್ತು ಕೊಳವೆ ಬಾವಿ ಕೊರೆಸುವ ಕಾಮಗಾರಿಗಾಗಿ ಬಿಡುಗಡೆ ಮಾಡಲಾಗಿದೆ.

ಡಿ) ರೂ.10.60 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ ಕಟ್ಟಡದ ರಿಪೇರಿ ಹಾಗೂ ರಿನೋವೇಶನ್ ಗಾಗಿ ಬಿಡುಗಡೆ ಮಾಡಲಾಗಿದೆ.

ಇ) ರೂ.1.96 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ,, ಶಿವಮೊಗ್ಗ ಕಚೇರಿಯನ್ನು ರೇಷ್ಮೆ ಇಲಾಖೆಯ ಕಟ್ಟಡಕ್ಕೆ ಸ್ಥಳಾಂತರಿಸಿದ್ದು, ಈ ಕಟ್ಟಡ ಹಳೆಯದಾಗಿದ್ದು, ಕಟ್ಟಡದ ನವೀಕರಣಕ್ಕಾಗಿ ಬಿಡುಗಡೆ ಮಾಡಲಾಗಿದೆ.

ಎಫ್) ರೂ.1.00 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಉತ್ತರ ಕನ್ನಡದ ಕಟ್ಟಡ ರಿಪೇರಿ ಮತ್ತು ಬಣ್ಣದ ಕೆಲಸಕ್ಕಾಗಿ ಬಿಡುಗಡೆ ಮಾಡಲಾಗಿದೆ.

ಜಿ) ರೂ.7.60 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ ಕಚೇರಿಯ ಒಳಾಂಗಣ ವ್ಯವಸ್ಥೆ ಮತ್ತು ಚರಂಡಿ ಕೆಲಸಕ್ಕಾಗಿ ಬಿಡುಗಡೆ ಮಾಡಲಾಗಿದೆ.

ಹೆಚ್) ರೂ.13.04 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿಗೆ ರಿಪೇರಿ ಕಾರ್ಯ ಮುಗಿಸಲು ಹಾಗೂ ಜಿಕೈಕೇ ರವರ ಕಟ್ಟಡ ಮತ್ತು ವಸತಿ ಗೃಹ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಲಾಗಿದೆ.

ಐ) ರೂ.5.60 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರಿನ ಕಾಂಪೌಂಡ್ ನಿರ್ಮಾಣ ಮತ್ತು ಶೌಚಾಲಯ ರಿಪೇರಿಗಾಗಿ ಬಿಡುಗಡೆ ಮಾಡಲಾಗಿದೆ.

ಜೆ) ರೂ.6.50 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಹಾಸನದ ದ್ವಿಚಕ್ರ ವಾಹನದ ನಿಲುಗಡೆ ಸ್ಥಳ ಹಾಗೂ ಬಣ್ಣದ ಕೆಲಸಕ್ಕಾಗಿ ಬಿಡುಗಡೆ ಮಾಡಲಾಗಿದೆ.

ಕೆ) ರೂ.13.25 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳಕ್ಕೆ ಕಟ್ಟಡದ ರಿಪೇರಿಗಾಗಿ ಬಿಡುಗಡೆ ಮಾಡಲಾಗಿದೆ.

ಎಲ್) ರೂ.30.18 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಉಡುಪಿಗೆ ಎಲೆಕ್ಟ್ರಿಕ್ ಕೆಲಸಕ್ಕಾಗಿ ಬಿಡುಗಡೆ ಮಾಡಲಾಗಿದೆ.

ಎಂ) ರೂ.7.40 ಲಕ್ಷಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಚಿತ್ರದುರ್ಗಕ್ಕೆ ತಾರಸಿಯ ಚುರ್ಕಿ ಕೆಲಸ ಮತ್ತು ಅಭಿವೃದ್ಧಿ ಕಾರ್ಯಕ್ರಮ ಹಾಗೂ ಜಿಕೈಕೇಂದ್ರದ ವಸತಿಗೃಹಗಳ ಕಾಂಪೌಂಡ್ ಕೆಲಸಕ್ಕಾಗಿ ಬಿಡುಗಡೆ ಮಾಡಲಾಗಿದೆ.

## 7) ರೋಗಗ್ರಸ್ತ ಸಣ್ಣ ಕೈಗಾರಿಕೆಗಳ ಪುನಶ್ಚೇತನ:
## ಲೆಕ್ಕ ಶೀರ್ಷಿಕೆ 6851–00–102–0–04

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 10.00 | 2.50 | 2.50 |

**ರೂ.2.50** ಲಕ್ಷಗಳನ್ನು ಅಂಕೋಲ ಪಿಕಲ್ಸ್, ಸರ್ವೆ ಗ್ರಾಮ, ಕಾರವಾರ ಜಿಲ್ಲೆಗೆ ಅಂಚು ಬೀಜಧನ ಸಹಾಯ ನೀಡಲಾಗಿದೆ.

## 8) ಕೈಗಾರಿಕಾ ವಿಕಾಸ : ಲೆಕ್ಕ ಶೀರ್ಷಿಕೆ 2851–00–102–0–70

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 727.00 | 692.59 | 692.59 |

ಈ ಯೋಜನೆಯಡಿ 79 ಹಿಂದುಳಿದ ಹಾಗೂ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳನ್ನು ಡಾ:ಡಿ.ಎಂ.ನಂಜುಂಡಪ್ಪ ರವರ ವರದಿ ಪ್ರಕಾರ ಗುರುತಿಸಿ ಅಲ್ಲಿ ಕೈಗಾರಿಕೀಕರಣವನ್ನು ಕೈಗೊಂಡು ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವ ಉದ್ದೇಶ ಹೊಂದಿದೆ.

ಒದಗಿಸಲಾದ ರೂ.727.00 ಲಕ್ಷಗಳ ಆಯವ್ಯಯದಲ್ಲಿ **ರೂ.692.59** ಲಕ್ಷಗಳನ್ನು ಈ ಕೆಳಕಂಡ ಮಂಡಳಿ / ನಿಗಮಗಳಿಗೆ ಬಿಡುಗಡೆಗೊಳಿಸಲಾಗಿದೆ.

ಅನುಷ್ಠಾನ ಮಾಡುತ್ತಿರುವ ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಅನುಷ್ಠಾನಗೊಳಿಸುವ ಸಂಸ್ಥೆ | ಬಿಡುಗಡೆಗೊಳಿಸಿದ ಅನುದಾನ(ಲಕ್ಷ ರೂ) | ಉದ್ದೇಶ |
|---|---|---|---|
| 1 | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ | ಎ) 29.59<br>ಬಿ) 98.00<br>ಸಿ) 177.00 | ಎ) ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಸಂಡಾ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗಾಗಿ<br>ಬಿ) ಬೀದರ್ ಜಿಲ್ಲೆಯ ಕೊಲ್ಹಾರ್ ನಲ್ಲಿ 2ನೇ ಹಂತದ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗಾಗಿ ಹಾಗೂ ಬಾಗಲಕೋಟೆ ಜಿಲ್ಲೆಯ ಬಿಳಗಿ ಮತ್ತು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯಲ್ಲಿ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗಾಗಿ |
| 2 | ಕರ್ನಾಟಕ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ | ಎ) 29.00<br>ಬಿ) 106.00<br>ಸಿ) 100.00<br>ಡಿ) 153.00 | ಎ) ಕೈಗಾರಿಕಾ ವಸಾಹತು ನಿರ್ಮಾಣಕ್ಕೆ ಮತ್ತು ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು<br>ಬಿ) ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ 20 ಎಕರೆಯ ಪ್ರದೇಶಗಳನ್ನು ಕೈಗಾರಿಕಾ ವಸಾಹತುವಾಗಿ ಅಭಿವೃದ್ಧಿಗೊಳಿಸಲು<br>ಸಿ) ಗುಲ್ಬರ್ಗ ಜಿಲ್ಲೆಯ ಶಹಬಾದ್‌ನಲ್ಲಿ ಹಾಗೂ ಬಿಜಾಪುರ ಜಿಲ್ಲೆಯ ಸಿಂಧಗಿಯಲ್ಲಿ ಕೈಗಾರಿಕಾ ವಸಾಹತುವಿನ ಅಭಿವೃದ್ಧಿಗಾಗಿ. |
| | **ಒಟ್ಟು** | **692.59** | |

## 9) ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ ಯೋಜನೆ:

**ಲೆಕ್ಕ ಶೀರ್ಷಿಕೆ : 2851–00–102–0–73**

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 605.00 | 467.75 | 467.75 |

ವಿಶೇಷ ಕುಶಲತೆ ಅಭಿವೃದ್ಧಿ ಸಂಸ್ಥೆಗಳನ್ನು ರಾಜ್ಯದ ಮುಖ್ಯವಾದ ಸ್ಥಳಗಳಲ್ಲಿ ಸ್ಥಾಪಿಸಿ ಕೈಗಾರಿಕಾ/ ಸೇವಾ ವಲಯಕ್ಕೆ ತಕ್ಕುದಾದ ತರಬೇತಿಯನ್ನು ನೀಡುವ ಉದ್ದೇಶವನ್ನು ಹೊಂದಿದೆ. ಸರ್ಕಾರಿ ಹಾಗೂ ಖಾಸಗಿ ಪಾಲುದಾರಿಕೆಯ ಉತ್ತೇಜನದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಯೋಜನಾ ವೆಚ್ಚ ಶೇ.50ರಷ್ಟು ಅಥವಾ ರೂ.2.00 ಕೋಟಿಯ ಗರಿಷ್ಠ ಮಿತಿಯ ಅನುದಾನದೊಂದಿಗೆ ತರಬೇತಿ ಕೇಂದ್ರ ಸ್ಥಾಪಿಸಲು ನೆರವು ನೀಡಲಾಗುವುದು. ಭೂಮಿ ಮತ್ತು ಕಟ್ಟಡದ ಹೂಡಿಕೆ ಮೇಲೆ ಶೇ.70ರಷ್ಟು ಗರಿಷ್ಟ ರೂ.140.00 ಲಕ್ಷಗಳನ್ನು ಹಾಗೂ ಯಂತ್ರೋಪಕರಣಗಳು ಮತ್ತು ಉಪಕರಣಗಳಿಗಾಗಿ ಶೇ.50 ರಷ್ಟು ಗರಿಷ್ಟ ರೂ.60.00 ಲಕ್ಷಗಳನ್ನು ಪ್ರತಿ ತರಬೇತಿ ಕೇಂದ್ರಕ್ಕೆ ಮಂಜೂರು ಮಾಡಿ ಬಿಡುಗಡೆ ಮಾಡಲಾಗುವುದು. ಹಾಗೂ ತರಬೇತಿಗಾಗಿ ಆವರ್ತ ವೆಚ್ಚ ರೂ.36.00 ಲಕ್ಷಗಳನ್ನು 2 ಕಂತುಗಳಲ್ಲಿ ಪ್ರತಿ ಹಂತದಲ್ಲಿ ರೂ.18.00 ಲಕ್ಷಗಳನ್ನು ಬಿಡುಗಡೆ ಮಾಡಲಾಗುವುದು.

2010–11ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಮೊತ್ತ ರೂ.605.00 ಲಕ್ಷಗಳಲ್ಲಿ 08 ಸಂಸ್ಥೆಗಳಿಗೆ **ರೂ.467.75** ಲಕ್ಷಗಳ ಅನುದಾನವನ್ನು ತರಬೇತಿ ಕೇಂದ್ರದ ಸ್ಥಾಪನೆ ಮತ್ತು ತರಬೇತಿಯ ಆವರ್ತಕ ವೆಚ್ಚಕ್ಕಾಗಿ ಬಿಡುಗಡೆಗೊಳಿಸಲಾಗಿದೆ.

ಈ ಯೋಜನೆಯಡಿಯಲ್ಲಿ ಒಟ್ಟು ರೂ. 467.25 ಲಕ್ಷಗಳನ್ನು ಈ ಕೆಳಕಂಡ 8 ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

1) ಭಾರತೀಯ ಗ್ರಾಮೀಣ ಅಭಿವೃದ್ಧಿ ಫೌಂಡೇಷನ್, ಹೊಸೂರು , ಬೆಳಗಾಂ ಜಿಲ್ಲೆಗೆ ತರಬೇತಿ ಸಂಸ್ಥೆಯ ಸ್ಥಾಪನೆಗೆ ರೂ . 42.00 ಲಕ್ಷಗಳು
2) ಜೆ.ಎಸ್.ಎಸ್. ಮಹಾ ವಿದ್ಯಾಪೀಠ ಚಾಮರಾಜನಗರ ಇವರಿಗೆ ತರಬೇತಿ ಸಂಸ್ಥೆಯ ಸ್ಥಾಪನೆಗೆ ರೂ. 98.00 ಲಕ್ಷಗಳು
3) ಜೆ.ಎಸ್.ಎಸ್. ಮಹಾ ವಿದ್ಯಾಪೀಠ ಮೈಸೂರು ಇವರಿಗೆ ನಂಜನಗೂಡಿನಲ್ಲಿ ತರಬೇತಿ ಸಂಸ್ಥೆಯ ಸ್ಥಾಪನೆಗೆ ರೂ. 56.00 ಲಕ್ಷಗಳು
4) ಬಿ.ಜಿ.ಎಸ್ ಸಸ್ಯಕಾಶಿ , ಬೆಳ್ಳೂರು ನಾಗಮಂಗಲ ತಾಲ್ಲೂಕು , ಮಂಡ್ಯ ಜಿಲ್ಲೆ ಇವರಿಗೆ ತರಬೇತಿಯ ಆವರ್ತಕ ವೆಚ್ಚಕ್ಕಾಗಿ ರೂ 6.75 ಲಕ್ಷಗಳು
5) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿದ್ಯಾ ಟ್ರಸ್ಟ್ ಉಜರೆಗೆ ಕಟ್ಟಡ ನಿರ್ಮಾಣಕ್ಕಾಗಿ ರೂ. 70.00 ಲಕ್ಷಗಳು
6) ಎಸ್.ಎಸ್.ಐ.ಟಿ. ತುಮಕೂರು ಸಂಸ್ಥೆಗೆ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕಾಗಿ ರೂ 40.00 ಲಕ್ಷಗಳು
7) ಎನ್.ಎಸ್. ಇನ್‌ಪೋಟೆಕ್ ಹುಬ್ಬಳ್ಳಿ ಇವರಿಗೆ ಯಂತ್ರೋಪಕರಣಗಳ ಹಾಗು ಪೀಠೋಪಕರಣಗಳ ಖರೀದಿಗಾಗಿ ರೂ.78.00 ಲಕ್ಷಗಳು.
8) ಮೆ. ಮಂದುಡಾ ಎಜುಕೇಷನಲ್‌ಟ್ರಸ್ಟ್ ದೊಡ್ಡಬಳ್ಳಾಪುರಕ್ಕೆ ಕಟ್ಟಡ ನಿರ್ಮಾಣಕ್ಕಾಗಿ ರೂ. 77.00 ಲಕ್ಷಗಳು.

## 10) ಖಾದಿ ಮತ್ತು ಸಣ್ಣ ಕೈಗಾರಿಕೆ ಉತ್ಪನ್ನಗಳ ಮೇಲಿನ ರಿಯಾಯಿತಿ: ಲೆಕ್ಕ ಶೀರ್ಷಿಕೆ 2851–00–102–0–74

| **ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ)** | **ಬಿಡುಗಡೆ (ರೂ.ಲಕ್ಷಗಳಲ್ಲಿ)** | **ವೆಚ್ಚ (ರೂ.ಲಕ್ಷಗಳಲ್ಲಿ)** |
|---|---|---|
| 548.13 | 548.13 | 548.13 |

ಖಾದಿ ಉತ್ಪಾದನೆ ಹಾಗೂ ಮಾರಾಟಕ್ಕೆ ಉತ್ತೇಜನ ನೀಡಿ ಖಾದಿ ವಲಯದಲ್ಲಿ ಹೆಚ್ಚು ಹೆಚ್ಚು ಉದ್ಯೋಗವಕಾಶವನ್ನು ಸೃಷ್ಟಿಸಲು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರವು ಖಾದಿ ಚಿಲ್ಲರೆ ಮಾರಾಟದ ಮೇಲೆ ರಿಯಾಯಿತಿಯನ್ನು ನೀಡುತ್ತಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವರ್ಷ ಪೂರ್ತಿ ಖಾದಿಯ ಚಿಲ್ಲರೆ ಮಾರಾಟದ ಮೇಲೆ ಕೇಂದ್ರ ಸರ್ಕಾರ ಶೇ 10 ರಷ್ಟು ಮತ್ತು ರಾಜ್ಯ ಸರ್ಕಾರ ಶೇ 5 ರಷ್ಟು ಸಾಮಾನ್ಯ ರಿಬೇಟ್ ನೀಡುತ್ತದೆ ಮತ್ತು 108 ವಿಶೇಷ ದಿನಗಳಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಾಮಾನ್ಯ ರಿಬೇಟಿನೊಂದಿಗೆ ಶೇ 10 ರಷ್ಟು ವಿಶೇಷ ರಿಬೇಟ್ ನೀಡುತ್ತದೆ.

2010–11 ನೇ ಸಾಲಿನಲ್ಲಿ ಒಟ್ಟು **ರೂ.548.13** ಲಕ್ಷಗಳನ್ನು ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳ ಮಾರಾಟದ ಮೇಲೆ ರಿಬೇಟ್ ಹಾಗೂ ನೂಲುವವರಿಗೆ, ಮತ್ತು ನೇಕಾರರಿಗೆ ಪ್ರೋತ್ಸಾಹ ಧನಕ್ಕಾಗಿ ಬಿಡುಗಡೆಗೊಳಿಸಲಾಗಿದೆ.

## 11) ಆಭರಣಗಳ ತರಬೇತಿ ಸಂಸ್ಥೆ: ಲೆಕ್ಕ ಶೀರ್ಷಿಕೆ : 4851–00–102–0–13

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 100.00 | 100.00 | 100.00 |

ಈ ಯೋಜನೆಗೆ ರೂ. 100.00 ಲಕ್ಷಗಳನ್ನು ಜಿ.ಟಿ.ಟಿ.ಸಿ. ಬೆಂಗಳೂರು ಇವರಿಗೆ ಆಭರಣಗಳ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲು 2010–11 ನೇ ಸಾಲಿನಲ್ಲಿ ಬಿಡುಗಡೆಗೊಳಿಸಲಾಗಿದೆ.

## 12) ಹೊಸ ಔದ್ಯಮಿಕ ಸಮೂಹಗಳ ಸ್ಥಾಪನೆ (ಎಸ್.ಸಿ.ಪಿ/ ಟಿ.ಎಸ್.ಪಿ/ಎಸ್‌ಡಿಪಿ) ಲೆಕ್ಕ ಶೀರ್ಷಿಕೆ 2852–80–003–0–12

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಎಸ್.ಸಿ.ಪಿ. | 940.40 | 597.92 | 597.92 |
| 2 | ಟಿ.ಎಸ್.ಪಿ. | 380.40 | 207.00 | 207.00 |
| 3 | ವಿಶೇಷ ಅಭಿವೃದ್ದಿ ಯೋಜನೆ (ಎಸ್.ಡಿ.ಪಿ) | 1000.00 | 490.00 | 490.00 |
| | **ಒಟ್ಟು** | **2320.80** | **1294.92** | **1294.92** |

**ಎಸ್.ಸಿ.ಪಿ:** ಹಂಚಿಕೆಯಾದ ಆಯವ್ಯಯ ರೂ.940.40 ಲಕ್ಷಗಳಾಗಿದ್ದು ಅದರಲ್ಲಿ **ರೂ.597.92** ಲಕ್ಷಗಳನ್ನು ಈ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಹಾಗೂ ಬಾಬು ಜಗಜೀವನ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ, ಹಾಗೂ ನಾರು ಅಭಿವೃದ್ದಿ ನಿಗಮಕ್ಕೆ ವಸತಿ ಕಾರ್ಯಾಗಾರಗಳನ್ನು ಹಾಗೂ ಉಚಿತವಾಗಿ ಟೂಲ್ ಕಿಟ್‌ಗಳನ್ನು ಸರಬರಾಜು ಮಾಡಲು ಹಾಗೂ ಕಚ್ಚಾ ಸಾಮಾಗ್ರಿಗಳ ಖರೀದಿಗಾಗಿ ದುಡಿಮೆ ಬಂಡವಾಳವನ್ನು ನೀಡಲು ಹಾಗೂ ಪರಿಶಿಷ್ಟ ಜಾತಿಯ ಕುಶಲ ಕರ್ಮಿಗಳಿಗೆ ವೆಸ್ಟೈಡ್ ಕ್ಯಾಬಿನ್‌ನನ್ನು ಲಿಡ್ಕರ್ ಮುಖಾಂತರ ನೀಡಲು ಹಣವನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿ 2176 ಫಲಾನುಭವಿಗಳಿಗೆ ಸಹಾಯ ಕಲ್ಪಿಸಲಾಗಿದೆ.

**ಟಿ.ಎಸ್.ಪಿ:** ರೂ.380.40 ಲಕ್ಷಗಳ ಆಯವ್ಯಯದಲ್ಲಿ **ರೂ.207.00** ಲಕ್ಷಗಳನ್ನು ಈ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಕೈಗಾರಿಕೆಗಳ, ಕರ್ನಾಟಕ ನಾರು ಅಭಿವೃದ್ದಿ ನಿಗಮ ಪರಿಶಿಷ್ಟ ಪಂಗಡಗಳ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಲು, ಉಚಿತ ಟೂಲ್ ಕಿಟ್‌ಗಳನ್ನು ಸರಬರಾಜು ಮಾಡಲು ಹಾಗೂ ಕಚ್ಚಾ ಸಾಮಾಗ್ರಿಗಳ ಖರೀದಿಗಾಗಿ ದುಡಿಮೆ ಬಂಡವಾಳ ನೀಡಲು ಹಾಗೂ ಕೆ.ಎಸ್.ಎಫ್.ಸಿ ಗೆ Soft Seed Captial Fund ಗೆ ಸಹಾಯ ನೀಡಲು ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿ 922 ಫಲಾನುಭವಿಗಳಿಗೆ ಸಹಾಯ ಕಲ್ಪಿಸಲಾಗಿದೆ.

**ಎಸ್.ಡಿ.ಪಿ:** ಒದಗಿಸಿದ ಆಯವ್ಯಯವು ರೂ.1,000.00 ಲಕ್ಷಗಳಾಗಿದ್ದು ಅದರಲ್ಲಿ **ರೂ.490.00** ಲಕ್ಷಗಳನ್ನು ಈ ಯೋಜನೆಗೆ ಬಿಡುಗಡೆ ಮಾಡಲಾಗಿದೆ. ಈ ರೂ.490.00ಗಳಲ್ಲಿ ರೂ.180.00 ಲಕ್ಷಗಳನ್ನು ಕೆ.ಐ.ಎ.ಡಿ.ಬಿ. ಗೆ ಬಿಜಾಪುರ ಜಿಲ್ಲೆಯ ಅಲಿಯಾ ಬಾದ್‌ನಲ್ಲಿ, ಗೌರಿಬಿದನೂರಿನ ಕುಡುಮಲ ಕುಂಟೆಯಲ್ಲಿ, ಹಾಗೂ ಚಾಮರಾಜನಗರ ಜಿಲ್ಲೆಯ ಬದನಕುಪ್ಪೆಯಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ನೀಡಲಾಗಿದೆ. ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗೆ ಗುಲ್ಬರ್ಗಾ ಜಿಲ್ಲೆ ಹುಮ್ನಾಬಾದ್ ಕೈಗಾರಿಕಾ ವಸಾಹತುವಿನಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ರೂ.60.00 ಲಕ್ಷಗಳನ್ನು ನೀಡಲಾಗಿದೆ. ಸಿದ್ಧ ಉಡುಪಿನ ಪಾರ್ಕ್‌ನ್ನು ಗುಲ್ಬರ್ಗಾ ಜಿಲ್ಲೆಯಲ್ಲಿ ಸ್ಥಾಪಿಸಲು ರೂ.250.00 ಲಕ್ಷಗಳನ್ನು ನೀಡಲಾಗಿದೆ.

## 13) ಆಹಾರ ಪಾರ್ಕ್‌ಗಳು: ಲೆಕ್ಕ ಶೀರ್ಷಿಕೆ 4851–00–800–5–00

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 772.50 | 450.00 | 450.00 |

ರೂ.772.50 ಲಕ್ಷಗಳ ಆಯವ್ಯಯದಲ್ಲಿ **ರೂ.450.00** ಲಕ್ಷಗಳನ್ನು ಫುಡ್ ಕರ್ನಾಟಕ ಲಿಮಿಟೆಡ್‌ರವರಿಗೆ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ, ಬಾಗಲಕೋಟೆ ಮತ್ತು ಶಿವಮೊಗ್ಗದಲ್ಲಿ ಆಹಾರ ಪಾರ್ಕ್‌ಗಳ ಸ್ಥಾಪನೆ/ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗಿದೆ.

## 14) ಡಾ.ಬಾಬು ಜಗಜೀವನರಾಮ ಅಭಿವೃದ್ಧಿ ನಿಗಮದ ಪುನಃಶ್ಚೇತನ– ಲಿಡ್ಕರ್– ಬಂಡವಾಳ:
## ಲೆಕ್ಕ ಶೀರ್ಷಿಕೆ 4851–00–200–0–02

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 250.00 | 250.00 | 250.00 |

2010–11ನೇ ಸಾಲಿನಲ್ಲಿ ಸತತವಾಗಿ 1,000 ಕುಶಲಕರ್ಮಿ ಕುಟುಂಬಗಳಿಗೆ ಉದ್ಯೋಗವನ್ನು ನೀಡಲು, ಕಚ್ಚಾ ಸಮಾಗ್ರಿಗಳನ್ನು ಕುಶಲಕರ್ಮಿಗಳಿಗೆ ಸರಬರಾಜು ಮಾಡಲು, ದಾವಣಗೆರೆ ಮತ್ತು ಮೈಸೂರಿನಲ್ಲಿ ಹೊಸ ಷೋರೂಮ್‌ಗಳನ್ನು ತೆರೆದು ಹಾಲಿ ಇರುವ ಷೋರೂಮ್‌ಗಳನ್ನು ಆಧುನೀಕರಣಗೊಳಿಸಲು, ಸಾಮಾನ್ಯ ಸೌಲಭ್ಯ ಕೇಂದ್ರಗಳಲ್ಲಿ ಸೌಕರ್ಯಗಳನ್ನು ಉನ್ನತೀಕರಿಸಿ, ನಿಗಮದ ಖಾಲಿ ನಿವೇಶನಕ್ಕೆ ಕಾಂಪೌಂಡು ಹಾಕಿಸುವ ಸಲುವಾಗಿ **ರೂ.250.00** ಲಕ್ಷಗಳನ್ನು ನೀಡಲಾಗಿದೆ.

## ಹೊಸ ಯೋಜನೆಗಳು:

### 15) ಆಹಾರ ಸಂಸ್ಕರಣಾ ಘಟಕಗಳು – ಬಂಡವಾಳ 4851–00–102–0–15

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 500.00 | 250.00 | 250.00 |

ಹೊಸ ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗಾಗಿ ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಗೆ ರೂ.250.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

### 16) ಕರಕುಶಲ ಗುರುಕುಲ ತರಬೇತಿ ಸಂಸ್ಥೆ– ಕಟ್ಟಡ ನಿರ್ಮಾಣ– ಲೆಕ್ಕ ಶೀರ್ಷಿಕೆ–4851–00–104–0–07

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 500.00 | 50.00 | 50.00 |

2010–11 ನೇ ಸಾಲಿನಲ್ಲಿ "ಶಿಲ್ಪ ಗುರುಕುಲ" ಸ್ಥಾಪನೆಗಾಗಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮಕ್ಕೆ **ರೂ.50.00** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

### 17) ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿಗೆ ವೆಂಚರ್ ಕ್ಯಾಪಿಟಲ್ ನಿಧಿ– ಲೆಕ್ಕ ಶೀರ್ಷಿಕೆ–4852–02–800–0–04

| ಆಯವ್ಯಯ ಹಂಚಿಕೆ (ರೂ.ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 100.00 | 100.00 | 100.00 |

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ವೆಂಚರ್ ಕ್ಯಾಪಿಟಲ್ ನಿಧಿಯನ್ನು ಒದಗಿಸಲಿಕ್ಕಾಗಿ ಕೆ. ಎಸ್.ಐ.ಐ.ಡಿ.ಸಿ ಸಂಸ್ಥೆಗೆ **ರೂ.100.00** ಲಕ್ಷಗಳನ್ನು ಬಿಡುಗಡೆ ಮಾಡಿದೆ.

**ಇತರೆ ಯೋಜನೆಗಳು:**

**18) ಬಾಂಡ್‌ಗಳನ್ನು ಬಿಡಿಸಿಕೊಳ್ಳಲು ಕೆ.ಎಸ್.ಐ.ಐ.ಡಿ.ಸಿ ಸಂಸ್ಥೆಗೆ ಸರ್ಕಾರದ ಬೆಂಬಲ ಲೆಕ್ಕ ಶೀರ್ಷಿಕೆ : 5465–01–190–2–01 (211) –ಬಂಡವಾಳ**

| ಆಯವ್ಯಯ ಹಂಚಿಕೆ (ರೂ ಲಕ್ಷಗಳಲ್ಲಿ) | ಬಿಡುಗಡೆ (ರೂ. ಲಕ್ಷಗಳಲ್ಲಿ) | ವೆಚ್ಚ (ರೂ ಲಕ್ಷಗಳಲ್ಲಿ) |
|---|---|---|
| 7000.00 | 2500.00 | 2500.00 |

2010–11ನೇ ಸಾಲಿನಲ್ಲಿ **ರೂ.2500.00** ಗಳನ್ನು ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಗೆ ಹೊಸ ಕ್ಯಾಷ್ ಇಕ್ವಿಟಿ ಬಂಡವಾಳವಾಗಿ ಬಿಡುಗಡೆ ಮಾಡಲಾಗಿದೆ.

**19) ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್:ಲೆಕ್ಕ ಶೀರ್ಷಿಕೆ –6858–01–190–6–00**

| ಆಯವ್ಯಯ ಹಂಚಿಕೆ (ರೂ ಲಕ್ಷಗಳಲ್ಲಿ) | ಬಿಡುಗಡೆ (ರೂ ಲಕ್ಷಗಳಲ್ಲಿ) | ವೆಚ್ಚ (ರೂ ಲಕ್ಷಗಳಲ್ಲಿ |
|---|---|---|
| 64.40 | 64.40 | 64.40 |

ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್‌ಗೆ **ರೂ.64.40** ಲಕ್ಷಗಳನ್ನು ಭಾರತ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ (ಸಿಡ್ಬಿ) ಅವರಿಗೆ ಒ.ಟಿ.ಎಸ್. ಆಧಾರದ ಮೇಲೆ ಬಾಕಿ ಉಳಿದಿರುವ ಸಾಲವನ್ನು ತೀರಿಸಲು ನೀಡಲಾಗಿದೆ.

**20) ತೆರಿಗೆ ಮರುಪಾವತಿ: ಲೆಕ್ಕ ಶೀರ್ಷಿಕೆ– 6852–02–800–0–02**

| ಆಯವ್ಯಯ ಹಂಚಿಕೆ (ರೂ ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 6031.00 | 6030.65 | 6030.65 |

ಮಾರ್ಚ್ 2009 ರಿಂದ ಜೂನ್ 2010ರವರೆಗೆ ಬಿ.ಇ. ಎಂ ಎಲ್ ರವರು ಅಂತರ್ ರಾಜ್ಯ ಮಾರುಕಟ್ಟೆಯಲ್ಲಿ ಮೆಟ್ರೋ ಕೋಚಸ್‌ಅನ್ನು ಡೆಲ್ಲಿ ಮೆಟ್ರೋ ರೈಲ್ ಕಾರ್ಪೋರೇಷನ್ ರವರಿಗೆ ಮಾರಾಟ ಮಾಡಿದ ಬಾಬ್ತು ಕೇಂದ್ರ ಮಾರಾಟ ತೆರಿಗೆಯನ್ನು ಭರ್ತಿಮಾಡಲು ಬಡ್ಡಿ ರಹಿತ ಸಾಲದ ರೂಪದಲ್ಲಿ **ರೂ.6030.65** ಲಕ್ಷಗಳನ್ನು ನೀಡಲಾಗಿದೆ. ಈ ಮೊತ್ತವನ್ನು ನಂತರದ ಹಂತದಲ್ಲಿ ಅನುದಾನವನ್ನಾಗಿ ಪರಿವರ್ತಿಸಲಾಗುತ್ತದೆ.

## 21) ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ: 2582–80–800–0–10

| ಆಯವ್ಯಯ ಹಂಚಿಕೆ (ರೂ ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 4.21 | 4.21 | 4.21 |

ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ–1957ರಡಿ ಹೊಸ ಕೈಗಾರಿಕಾ ಘಟಕಗಳಿಗೆ ಪ್ರೋತ್ಸಾಹ ಮತ್ತು ವಿನಾಯಿತಿ ಆಧಾರದ ಮೇಲೆ ವಿವಿಧ ಆರು ಘಟಕಗಳಿಗೆ ಒಟ್ಟು **ರೂ.4.21** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

## 22) ಕೈಗಾರಿಕಾ ಘಟಕಗಳು ಕಟ್ಟಿದ ಮೌಲ್ಯವರ್ಧಿತ ತೆರಿಗೆಯ ಮೇಲೆ ಸಾಲ: ಲೆಕ್ಕ ಶೀರ್ಷಿಕೆ: 6852–02–800–0–01

| ಆಯವ್ಯಯ ಹಂಚಿಕೆ (ರೂ ಲಕ್ಷಗಳಲ್ಲಿ) | ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 5000.00 | 1798.00 | 1798.00 |

ಮೌಲ್ಯಾಧಾರಿತ ತೆರಿಗೆ ಮೇಲೆ ಮೃದು ಸಾಲ (Soft Loan) **ರೂ.1798.00** ಲಕ್ಷಗಳನ್ನು ಮೆ. ಟಾಟಾ ಮಾರ್ಕೊಪೊಲೊ ಮೋಟಾರ್ಸ್, ಬೇಲೂರು ಕೈಗಾರಿಕಾ ಪ್ರದೇಶ, ಧಾರವಾಡ ರವರಿಗೆ ಲಘು ಮೋಟಾರ್ ವಾಹನ ಹಾಗೂ ಬಿಡಿ ಭಾಗಗಳ ತಯಾರಿಕೆಗಾಗಿ ಬಿಡುಗಡೆ ಮಾಡಲಾಗಿದೆ.

## 23. ಶ್ರೀಗಂಧದ ಕುಶಲಕರ್ಮಿಗಳಿಗೆ ಶ್ರೀಗಂಧವನ್ನು ರಿಯಾಯಿತಿ ದರದಲ್ಲಿ ಒದಗಿಸಲು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮಕ್ಕೆ ಅನುದಾನ :

**ಲೆಕ್ಕ ಶೀರ್ಷಿಕೆ:2851–00–104–0–18–106(ಯೋಜನೆ)**
**(2ನೇ ಪೂರಕ ಅಂದಾಜು ಆಯವ್ಯಯದಲ್ಲಿ)**

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ರಾಜ್ಯದಲ್ಲಿರುವ ಶ್ರೀಗಂಧ ಕೆತ್ತನೆಯಲ್ಲಿ ನಿರತರಾಗಿರುವ ಕುಶಕರ್ಮಿಗಳಿಗೆ ಅಗತ್ಯವಾದ ಕಚ್ಚಾ ಮಾಲಾದ ಶ್ರೀಗಂಧವನ್ನು ಅರಣ್ಯ ಇಲಾಖೆಯಿಂದ ಖರೀದಿಸಿ, ರಿಯಾಯಿತಿ ದರದಲ್ಲಿ ಕುಶಲಕರ್ಮಿಗಳಿಗೆ ಒದಗಿಸಲು ರೂ. 100ಲಕ್ಷಗಳನ್ನು ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

*******